# ಛಲಗಾರ ನಾರಾಯಣರೆಡ್ಡಿ

ರವಿ ಹಾದಿಮನಿ

ಸಹಾಯಕ ಪ್ರಾಧ್ಯಾಪಕರು, ಕೊಲ್ಲಿ ನಾಗೇಶ್ವರರಾವ್ ಗಂಗಯ್ಯ ಸರಕಾರಿ ಪ್ರಥಮ ದರ್ಜೆ ಕಾಲೇಜು, ಗಂಗಾವತಿ, ಕೊಪ್ಪಳ.

DOI: https://doi.org/10.5281/zenodo.17013611

## ABSTRACT:

ನಾರಾಯಣರೆಡ್ಡಿ ಅವರು 1935ರಲ್ಲಿ ಬೆಂಗಳೂರು ಜಿಲ್ಲೆಯ ಹತ್ತಿರವಿರುವ ವರ್ತೂರಿನ ಸೋರಹುಣಸೆ ಎಂಬ ಹಳ್ಳಿಯಲ್ಲಿ ಜನಿಸಿದರು. ಅವರ ಕುಟುಂಬ ಕೃಷಿಯನ್ನೇ ಉಸಿರಾಗಿಸಿಕೊಂಡಿತ್ತು. ಅವರು ಬಹಳ ಸಾಮಾನ್ಯ ಮತ್ತು ಕಷ್ಟಕರವಾದ ಪರಿಸ್ಥಿತಿಗಳಲ್ಲಿ ಬೆಳೆಯಬೇಕಾಯಿತು. ಈ ಕಾರಣದಿಂದ ನಾರಾಯಣರೆಡ್ಡಿ ಅವರು ತೀವ್ರ ಮಾನಸಿಕ ತೊಂದರೆಗಳು ಮತ್ತು ಒತ್ತಡಗಳಿಗೆ ಒಳಗಾಗಬೇಕಾಯಿತು. ಆದರೆ ಈ ಸವಾಲುಗಳು ಅವರನ್ನು ಕುಗ್ಗಿಸಲೇ ಇಲ್ಲ; ಬದಲಿಗೆ, ಅವರು ಬಲವಾಗಿ ಎದುರಿಸಿದರು.

ಅಧ್ಯಯನಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿ, ಪುಸ್ತಕಗಳಿಲ್ಲದೆ, ಪೆನ್ಸಿಲ್ ಇಲ್ಲದೆ, ಕಾಲಿನಲ್ಲಿ ಚಪ್ಪಲಿ ಇಲ್ಲದ ಪರಿಸ್ಥಿತಿಗಳಲ್ಲಿಯೂ ಅವರು ಶಿಕ್ಷಣದ ಮಹತ್ವವನ್ನು ಅರಿತುಕೊಂಡಿದ್ದರು. ಅವರು ಬಡತನದಿಂದ ಹೋಟೆಲ್ ಕ್ಲೀನರ್ ಆಗಿ ಕೆಲಸ ಮಾಡಲು ಆರಂಭಿಸಿದರು. ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳನ್ನೂ ತಾವು ಸ್ವಯಂ ಅಧ್ಯಯನದ ಮೂಲಕ ಕಲಿತರು. ಇತರ ಮಕ್ಕಳಿಗೆ ಉಚಿತವಾಗಿ ಪಾಠ ಹೇಳುತ್ತಿದ್ದ ಅವರು ಶಿಕ್ಷಣವನ್ನು ಜನಸಾಮಾನ್ಯರ ಹಕ್ಕಾಗಿ ಪರಿಗಣಿಸುತ್ತಿದ್ದರು. ಅವರು ಬದ್ಧತೆ, ಶಿಸ್ತು, ಪ್ರಾಮಾಣಿಕತೆ ಮತ್ತು ಧೈರ್ಯದಿಂದ ಮೇಲಕ್ಕೇರಲು ಶ್ರಮಿಸಿದರು. ಸ್ವಂತ ಉದ್ಯಮ ಆರಂಭಿಸುವ ಕನಸುಳ್ಳ ನಾರಾಯಣರೆಡ್ಡಿ ಅವರು ಎಷ್ಟೇ ಕಠಿಣ ಸಂದರ್ಭ ಎದುರಾದರೂ ಹಿಂದೆ ಸರಿಯಲಿಲ್ಲ.

ಅವರ ಬದುಕು ನಮಗೆ ಒಂದು ಮಹತ್ತರ ಪಾಠ ಕಲಿಸುತ್ತದೆ— ಸಾಧನೆಯ ಮುನ್ನೆಲೆಯು ಹಣವಲ್ಲ, ಜನ್ಮವಲ್ಲ, ಆದರೆ ಛಲ, ಶ್ರದ್ಧೆ ಮತ್ತು ಪರಿಶ್ರಮ. ಅವರು ತಮ್ಮ ಜೀವನದಲ್ಲಿ ಪ್ರತಿಯೊಂದು ಅವಕಾಶವನ್ನು ಉತ್ತಮ ರೀತಿಯಲ್ಲಿ ಬಳಸಿಕೊಳ್ಳುವ ಪ್ರಯತ್ನ ಮಾಡಿದರು. ಜೀವನದಲ್ಲಿ ಏನೇ ಕಷ್ಟ ಬಂದರೂ ನೈತಿಕತೆ ಮತ್ತು ಆತ್ಮವಿಶ್ವಾಸವನ್ನು ಕಳೆದುಕೊಳ್ಳಬಾರದು ಎಂಬುದನ್ನು ತಮ್ಮ ನಡೆನುಡಿಗಳಿಂದ ನಿರಂತರವಾಗಿ ತೋರಿಸಿದ್ದಾರೆ.

ನಾರಾಯಣರೆಡ್ಡಿ ಅವರು ಕೇವಲ ವ್ಯಕ್ತಿಯಲ್ಲ, ಹೋರಾಟದ ಪ್ರತೀಕ. ಅವರು ನಿರಾಶೆಗೊಳಗಾದವರಿಗೆ, ದುಡಿದು ಬದುಕು ಕಟ್ಟಿಕೊಳ್ಳುವ ಆಶಯವಿರುವವರಿಗೆ ಪ್ರೇರಣೆಯಾಗಿದೆ. ಅವರ ಬದುಕು ಇಂದು ಸಾವಿರಾರು ಯುವಕರಿಗೆ ಮಾರ್ಗದರ್ಶಿಯಾಗಿದೆ. ಹೀಗೆ ಕುರಿ ಕಾಯಲು ಹೋಗಿ ತಡವಾಗಿ ಬಂದಿದ್ದರಿಂದ ಅಪ್ಪನ ಏಟಿನಿಂದ ಅವಮಾನಿತನಾಗಿ, ದಾಯಾದಿಗಳ ಚುಚ್ಚು

ಮಾತುಗಳಿಂದ ಬೇಸರಗೊಂಡ ಬುದ್ಧನಂತೆ ಮಧ್ಯರಾತ್ರಿ ಮನೆಬಿಟ್ಟು ಹೋಗಿ ಸಾಧಕನಾಗಿ ಅಣ್ಣ ರಾಮಯ್ಯನ ಮೂಲಕ ಮೂಲ ಗೂಡು ಸೇರಿದ ಒಂಟಿ ಹಕ್ಕಿಗೆ ಜೋಡಿಯಾಗಿ ಸರೋಜಮ್ಮನವರೊಂದಿಗೆ ವಿವಾಹ ಮಾಡಿಕೊಟ್ಟರು. ತಂದೆಯವರ ಆಸೆಯಂತೆ ಕಂಪನಿಯ ಕೆಲಸ ಬಿಟ್ಟು ತಮ್ಮ ಮನೆತನದ ಉಸಿರಾದ ಕೃಷಿಯಲ್ಲಿ ನಂಬಿಕೆಯಿರಿಸಿ ಬದುಕಿನ ಪಯಣ ಸಾಗಿಸಿದರು.

**KEYWORDS:**

ಕ್ರೂರದೃಷ್ಟಿ, ಪಾಟಿ, ಮತ್ಸರಭಾವ, ಕಡುಬು, ಗಬ್ಬುನಾತ, ಟೈಪ್‌ರೈಟಿಂಗ್, ಭೋಟಾಶಕೀಲ್, ಹಫ್ತಾ.

ಮೂಲತಃ ಆಂಧ್ರಪ್ರದೇಶದ ಪುಂಗನೂರಿನ ಒಂದು ಅವಿಭಕ್ತ ಕುಟುಂಬದ ಮೇಲೆ ವಿಜಯನಗರ ಸಾಮ್ರಾಜ್ಯದ ಪತನದ ನಂತರ ಅಧಿಕಾರಕ್ಕೆ ಬಂದ ಸುಲ್ತಾನ ಮನೆತನದ ರಾಜನೊಬ್ಬನ ಕ್ರೂರದೃಷ್ಟಿ ಬಿದ್ದು; ಸುಸಂಸ್ಕೃತ ಸಂಪ್ರದಾಯವನ್ನು ಪಾಲಿಸಿಕೊಂಡು ಬದುಕುತ್ತಿದ್ದ ಈ ಹಾಲಿನಂತ ಸಂಸಾರಕ್ಕೆ ಹುಳಿಯಂತೆ ಕಂಟಕವಾದನು. ಈ ಕುಟುಂಬದ ಕನ್ಯೆಯೊಬ್ಬಳು ಸ್ಫುರದ್ರೂಪಿಯಾಗಿದ್ದಳು. ಇವಳನ್ನು ಮದುವೆಯಾಗಲು ಅವಳಿಗೆ ದುಂಬಾಲು ಬಿದ್ದ, ಆದರೆ ಅವನ ಮನವಿಯನ್ನು ಆ ಸುಂದರ ಕನ್ಯೆಯು ತಿರಸ್ಕರಿಸಿದಳು. ಇದರಿಂದ ರೊಚ್ಚಿಗೆದ್ದ ಆ ರಾಜನು ಅವಳ ಕುಟುಂಬದ ಸದಸ್ಯರಿಗೆ ಚಿತ್ರಹಿಂಸಿಸಲು ಪ್ರಾರಂಭಿಸಿದ್ದರಿಂದ ವಿಧಿಯಿಲ್ಲದೆ ಆ ಕುಟುಂಬದ ಹಿರಿಯರೆಲ್ಲರೂ ಮನವೊಲಿಸಿ ತಾನು ರಾಜನನ್ನು ವರಿಸಲು ನಿರ್ಧರಿಸಿದಳು. ಪೋಷಕರಿಗೂ ಯಾವ ದಾರಿ ಕಾಣದೆ ವಿಧಿಯಿಲ್ಲದೆ ತಮ್ಮ ಮನೆತನದ ಸುಂದರ ಕನ್ಯೆಯನ್ನು ಆ ಕ್ರೂರರಾಜನೊಂದಿಗೆ ಮದುವೆ ಮಾಡಿಕೊಟ್ಟರು. ಮೊದಲ ರಾತ್ರಿಯ ಹಿಂದಿನ ದಿನ ತನ್ನ ಕುಟುಂಬದ ಸದಸ್ಯರೆಲ್ಲರನ್ನೂ ಕೂಡಿಸಿಕೊಂಡು "ನನ್ನ ಪ್ರಾಣ ಹೋದರೂ ಚಿಂತೆಯಿಲ್ಲ ಅವನಿಗೆ ದೇಹವನ್ನು ಒಪ್ಪಿಸಲಾರೆ; ಇಲ್ಲಿಯವರೆಗೂ ಕಾಪಾಡಿಕೊಂಡು ಬಂದಿರುವ ನಿಮ್ಮ ಕುಟುಂಬದ ಮರ್ಯಾದೆಯನ್ನು ಹಾಳು ಮಾಡಲಾರೆ, ನನ್ನ ಮೇಲೆ ನಂಬಿಕೆಯಿರಿಸಿ, ಅವನನ್ನು ಕೊಲ್ಲಲು ನಿರ್ಧರಿಸಿದ್ದೇನೆ. ಕೊಂದ ನಂತರ ಖಂಡಿತವಾಗಿಯೂ ಅವರು ನನ್ನನ್ನು ಕೊಲ್ಲದೇ ಬಿಡಲಾರರು ಎಂದು ದುಃಖತಪ್ತವಾಗಿ ಹೇಳಿ ಕಣ್ಣೀರು ಸುರಿಸುತ್ತಾ ನಿಮ್ಮ ಮನೆಮಗಳನ್ನು ಮರೆತುಬಿಡಿ. ನೀವು ಇಲ್ಲೇ ಇದ್ದರೆ ನಿಮ್ಮ ಪ್ರಾಣಕ್ಕೆ ಕಂಟಕವಾಗಬಹುದು. ಆದ್ದರಿಂದ ನೀವೆಲ್ಲರೂ ಪ್ರಾಣಾಪಾಯದಿಂದ ಪಾರಾಗಲು ದೂರ ಪ್ರದೇಶಕ್ಕೆ ಈಗಲೇ ಹೊರಟುಬಿಡಿ" ಎಂದು ಕುಟುಂಬದವರಲ್ಲಿ ಮನವಿ ಮಾಡಿಕೊಂಡಿದ್ದರಿಂದ, ಕೆಲವರು ಗೋವಾದತ್ತ, ಮತ್ತೆ ಹಲವರು ಕೊಚ್ಚಿನ್, ಮಧುರೈ

ಹೀಗೆ ತಮಗೆ ತೋಚಿದ ದಿಕ್ಕಿಗೆ ಒಂದೊಂದು ಕುಟುಂಬ ಹೋಯಿತು. ಅದರಲ್ಲಿ ಒಂದು ಕುಟುಂಬ ಕರ್ನಾಟಕದತ್ತ ಬಂದು ನೆಲೆಯೂರಿತು. ಅತ್ತ ತನ್ನ ಕುಟುಂಬದವರಿಗೆ ಮಾತು ಕೊಟ್ಟಂತೆ ಮೊದಲರಾತ್ರಿ ದಿನ "ತನ್ನ ಪ್ರಾಣ ಹೋದರೂ ಈ ಲಂಪಟನೊಡನೆ ಸೇರಲಾರೆ ಎಂದು ಪ್ರತಿರೋಧಿಸಿದಳು. ಆದರೆ ಅವನ ಕಾಟ ಮಿತಿಮೀರಿದಾಗ ಚಂಡಿಚಾಮುಂಡಿಯಾಗಿ ಕತ್ತಿಯಿಂದ ರಾಜನ ಚಂಡು ಕತ್ತರಿಸಿ, ರಕ್ತದ ಮಡುವಿನಲ್ಲಿ ವಿಲವಿಲ ಒದ್ದಾಡುತ್ತಾ ಸಾಯುವಂತೆ ಮಾಡಿದಳು. ಈ ಮನೆತನದ ಒಂಬತ್ತನೇ ತಲೆಮಾರಿನ ಕುಡಿಯೊಂದು ಬೆಂಗಳೂರಿನ ಪೂರ್ವದ ವರ್ತೂರಿನ ಸೋರಹುಣಸೆ ಗ್ರಾಮದಲ್ಲಿ 1935ರ ಸೆಪ್ಟೆಂಬರ್ 18 ರಂದು ಲಕ್ಷ್ಮಯ್ಯ ರೆಡ್ಡಿ–ಎಲ್ಲಮ್ಮ ಎಂಬ ಕೃಷಿಯನ್ನೇ ಉಸಿರಾಗಿಸಿಕೊಂಡ ದಂಪತಿಗಳ ಹದಿನಾಲ್ಕನೆಯ ಮಗುವಾಗಿ ಜನಿಸಿದ ಈ ಮಗುವಿಗೆ 'ನಾರಾಯಣ'ನೆಂದು ನಾಮಕರಣ ಮಾಡಿದರು.

ನಾರಾಯಣನ ತಂದೆ ತಿಳುವಳಿಕೆಯುಳ್ಳವರಾದರೂ ಸಹ ತಮ್ಮ ಹದಿನೆಂಟು ಮಕ್ಕಳಿಗೆ ಶಿಕ್ಷಣ ಕೊಡಿಸಿ ವಿದ್ಯಾವಂತರನ್ನಾಗಿ ಮಾಡಬೇಕೆಂಬ ಯೋಚನೆಯ ಕುರಿತು ತಾತ್ಸಾರ ಮನೋಭಾವದವರಾಗಿದ್ದರು. ಈ ಹದಿನೆಂಟು ಮಕ್ಕಳಲ್ಲಿ ಅದೃಷ್ಟವಶಾತ್ ಶಿಕ್ಷಣ ದೊರೆಯಲು ಅವಕಾಶ ಸಿಕ್ಕಿದ್ದು ಇಬ್ಬರಿಗೆ ಮಾತ್ರ. ಶಾಲೆಗೆ ಸೇರಿಸಲು ಇವರಿಬ್ಬರು ಕೃಷಿಯಲ್ಲಿ ದುಡಿಯಲು ಅಸಮರ್ಥರಾಗಿದ್ದರೆಂಬ ಕಾರಣದಿಂದ. ಒಬ್ಬ ಮಗ "ತೆಂಗಿನಮರದಿಂದ ಬಿದ್ದು ಕಾಲು ಮುರಿದುಕೊಂಡು ಅಂಗವಿಕಲನಾಗಿದ್ದ, ಇನ್ನೊಬ್ಬ ಈ ನಾರಾಯಣ ಯಾವಾಗಲೂ ಅನಾರೋಗ್ಯಪೀಡಿತನಾಗಿ ಅಶಕ್ತನಾದ ಕಾರಣದಿಂದ ತಂದೆಯವರು ಇವರನ್ನು ಅದೇ ಗ್ರಾಮದ ಪ್ರಾಥಮಿಕ ಶಾಲೆಗೆ ಸೇರಿಸಿದರು. ಅಂದಿನ ಶಿಕ್ಷಣ ಪದ್ಧತಿಯಂತೆ "ಹೊಂಗೆ ಮರದ ನೆರಳಿನಲ್ಲಿ ಕೆಳಗೆ ನಾಲ್ಕಡಿ ಮರಳನ್ನೇ (ಉಸುಕು) ಪಾಟಿಯನ್ನಾಗಿ ಮಾಡಿಕೊಂಡು, ಕೈಗೆ ಸಿಕ್ಕ ಕಡ್ಡಿಯನ್ನೇ ಬಳಪವನ್ನಾಗಿ ಬಳಸಿ ಅಕ್ಷರಾಭ್ಯಾಸವನ್ನು ಅಂದಿನ ಶಿಕ್ಷಕರು ಕಲಿಸುತ್ತಿದ್ದರಿಂದ ಮಕ್ಕಳು ಅಷ್ಟೇ ಆಸಕ್ತಿಯಿಂದ ಕಲಿಯುತ್ತಿದ್ದರು. ಸಾಹಿತಿಗಳಾದ ಸಾ.ಶಿ. ಮರುಳಯ್ಯನವರು ಮರಳಿನ ಮೇಲೆ ಕೈಬೆರಳನ್ನೇ ಬಳಪದಂತೆ ಬಳಸುತ್ತಿದ್ದರಿಂದ ಕೆಲವೊಂದು ಸಲ ರಕ್ತ ಬರುತ್ತಿತ್ತೆಂದು ತಮ್ಮ ಸ್ವಂತ ಅನುಭವವನ್ನು ಹೇಳಿಕೊಂಡಿದ್ದಾರೆ. "ಇಂದಿನ ಶಿಕ್ಷಣವೆಂಬುದು ಮಕ್ಕಳಿಗೆ ಶಿಕ್ಷೆಯಾಗಿದೆ. ಅದೊಂದು ಹಿಂಸೆ, ಹೊರೆ, ಮಾರುಕಟ್ಟೆ ಕೇಂದ್ರಿತ ಶಿಕ್ಷಣದಿಂದ ಯಂತ್ರಗಳು ತಯಾರಾಗುತ್ತವೆಯೇ ಹೊರತು ಆರೋಗ್ಯವಂತ ವ್ಯಕ್ತಿಗಳನ್ನಲ್ಲ" ಎಂದು ನಾರಾಯಣ ರೆಡ್ಡಿಯವರ ಅಭಿಪ್ರಾಯ. (ನೆಲದೊಡಲ ಚಿಗುರು 17ನೇ ಪುಟ)

ನಾರಾಯಣನು ಪ್ರಾಥಮಿಕ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿರುವಾಗ ಮನೆಯಲ್ಲಿ ಕೃಷಿಗೆ ಸಂಬಂಧಿಸಿದ ಕೆಲಸಗಳನ್ನು ನಿರ್ವಹಿಸುತ್ತಿದ್ದನು. ಎತ್ತು–ಹಸುಗಳಿಗೆ ಮೇವು ತಿನಿಸುವುದೆಂದರೆ ಬಹುಪ್ರೀತಿ. ಮನೆಯ ದೀಪದ ಅಡಿ

ಪುಸ್ತಕವಿಟ್ಟು ಓದುವಾಗ ಮನಸ್ಸು ಮಾತ್ರ ದನ-ಕರುಗಳಿಗೆ ಮೇವವನ್ನು ತಿನ್ನಿಸುವುದರಲ್ಲಿ ತಲ್ಲೀನವಾಗಿರುತ್ತಿತ್ತು. ಶಾಲೆಯಲ್ಲಿ ಸ್ವಲ್ಪ ವಿದ್ಯಾಭ್ಯಾಸದಲ್ಲಿ ಮುಂದಿದ್ದ ನಾರಾಯಣನನ್ನು ಕಂಡರೆ ತೆಂಗಿನ ಮರದಿಂದ ಬಿದ್ದು ಕಾಲುಮುರಿದುಕೊಂಡ ಸಹೋದರನಿಗೆ ಮತ್ಸರವಿತ್ತು. ಜೊತೆಗೆ ತಂದೆಗೆ ಇವನು ಒಬ್ಬ ಆಪ್ತ ಸಲಹೆಗಾರನಂತೆ ಇದ್ದಿದ್ದರಿಂದ 'ನಾರಾಯಣನು ತಂದೆಯನ್ನು ನೋಟ್‌ಬುಕ್ ಕೊಡಿಸಲು ಕೇಳಿದರೆ, ''ಅಯ್ಯೋ ಯಾವುದೂ ಬೇಡ ಸುಮ್ನಿರಿ, ಅದಕ್ಕೆ ಯಾಕೆ ಖರ್ಚು ಮಾಡುತ್ತೀರಾ, ನನ್ನ ಹಳೆಯ ನೋಟ್‌ಬುಕ್ಕಿನಲ್ಲಿ ಕೆಲವು ಖಾಲಿ ಹಾಳೆಗಳುಂಟು ಅವುಗಳಲ್ಲಿಯೇ ಬರೆದುಕೊಳ್ಳಲಿ ಬಿಡಿ' ಎಂದು ತಂದೆಗೆ ಚಾಡಿ ಹೇಳಿ ಇವರನ್ನು ನಿರಾಶೆಯ ಮಡುವಿಗೆ ನೂಕುತ್ತಿದ್ದನು. ತಂದೆಗೋ ಮಗ ರೊಕ್ಕ ಉಳಿಸಿದನಲ್ಲವೇ ಎಂಬ ಕಾರಣದಿಂದ ಅವನ ಮಾತಿಗೆ ಬೆಲೆಕೊಟ್ಟು ನಾರಾಯಣನಿಗೆ ತಾತ್ಸಾರದಿಂದ ಕಾಣುವಂತಾಗುತ್ತಿತ್ತು.

ಹೀಗಾಗಿ ಅಣ್ಣನ ಅಳಿದುಳಿದ ಖಾಲಿ ಹಾಳೆಗಳ ಪುಸ್ತಕಗಳನ್ನು ತೆಗೆದುಕೊಂಡು ಶಾಲೆಗೆ ಹೋದರೆ ಅದು ಒಂದೆರಡು ದಿನಗಳಲ್ಲಿ ತುಂಬಿ ಹೋಗುತ್ತಿದ್ದವು. ಮನೆಯಲ್ಲಿ ತಂದೆಯನ್ನು ಕೇಳಿದರೆ ಬೈಗುಳಗಳ ಸುರಿಮಳೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೆ, ಇತ್ತ ಶಾಲೆಯಲ್ಲಿ ಶಿಕ್ಷಕರು ನೋಟ್‌ಪುಸ್ತಕವಿಲ್ಲದ್ದರಿಂದ ಹೊಡೆದು-ಅವಮಾನಿಸಿ ತರಗತಿಯಿಂದ ಹೊರಹಾಕುತ್ತಿದ್ದರು. ನಾರಾಯಣನ ಪರಿಸ್ಥಿತಿ ಒಂದರ್ಥದಲ್ಲಿ 'ಅತ್ತ ಹುಲಿ, ಇತ್ತ ದರಿ' ಎನ್ನುವಂತಾಗಿದ್ದು ಮತ್ಸರಭಾವದ ಸಹೋದರನಿಂದಾಗಿತ್ತು.

ಶಾಲೆಯ ಹತ್ತಿರದ ಮಿಠಾಯಿ ಅಂಗಡಿಗೆ ಶ್ರೀಮಂತರ ಮಕ್ಕಳು ಮಿಠಾಯಿ ಆಸೆಗಾಗಿ ಅರೆ-ಬರೆ ತುಂಬಿದ ನೋಟ್‌ಪುಸ್ತಕಗಳನ್ನು ಕೊಡುತ್ತಿದ್ದರು. ನೋಟ್‌ಬುಕ್ ಇಲ್ಲದೆ ಶಾಲೆಯಲ್ಲಿ ಅವಮಾನಕ್ಕೊಳಗಾಗುತ್ತಿದ್ದ ನಾರಾಯಣನಿಗೆ ಒಂದು ಯೋಚನೆ ಹೊಳೆದು, ಮಿಠಾಯಿ ಅಂಗಡಿಯವನನ್ನು ಪರಿಚಯಿಸಿಕೊಂಡು 'ಅಣ್ಣಾ ಈ ನೋಟ್‌ಬುಕ್‌ಗಳನ್ನು ಸ್ವಲ್ಪ ತೆಗೆದುಕೊಂಡು ಹೋಗಿ ನಾಳೆ ತೆಗೆದುಕೊಂಡು ಬರುತ್ತೇನೆಂದು ಹೇಳಿ, ಮನೆಗೆ ತಂದು ಅದರಲ್ಲಿರುವ ಖಾಲಿ ಹಾಳೆಗಳನ್ನು ಕಿತ್ತುಕೊಂಡು, ಸೂಜಿಯಿಂದ ಸಂಗ್ರಹಿಸಿದ ಹಾಳೆಗಳನ್ನೇ ನೋಟ್‌ಬುಕ್‌ನಂತೆಯೇ ಹೊಲಿದುಕೊಂಡು ಶಾಲೆಗೆ ಹೋಗುತ್ತಿದ್ದರು. ಇದು ಓದಿ ರ್‍ಯಾಂಕ್ ಬರುವ ಉದ್ದೇಶವೂ ಆಗಿರಲಿಲ್ಲ. ಶಿಕ್ಷಕರ ಅವಮಾನ-ಹೊಡೆತಗಳಿಂದ ತಪ್ಪಿಸಿಕೊಳ್ಳಲು ಕಂಡುಕೊಂಡ ಮಾರ್ಗವಾಗಿತ್ತು. ಒಂದು ವಸ್ತುವನ್ನು ಪರಿಪೂರ್ಣವಾಗಿ ಬಳಸಿಕೊಳ್ಳುವ ಗುಣವನ್ನು ಅಂದಿನಿಂದ ತಮ್ಮ ಬದುಕಿನುದ್ದಕ್ಕೂ ಚಾಚುತಪ್ಪದೆ ಪಾಲಿಸಿಕೊಂಡು ಬಂದಿದ್ದರು. ಇಲ್ಲಿ ಆ ಮಿಠಾಯಿ ಅಂಗಡಿಯವನ ಉದಾರಗುಣ ಅಂದಿನ ಜನರ ಸಹಾಯ ಮನೋಭಾವವನ್ನು ಅರಿಯಬಹುದಾಗಿದೆ.

ಊರಿನಲ್ಲಿರುವ ಪ್ರಾಥಮಿಕ ಶಿಕ್ಷಣದ ನಂತರ, ತಂದೆಯವರಿಗೆ ಮುಂದಿನ

ಓದನ್ನು ನಿಲ್ಲಿಸಿ ಕೃಷಿ ಚಟುವಟಿಕೆಯಲ್ಲಿ ಪಾಲ್ಗೊಳ್ಳುವಂತೆ ಮಾಡೋಣವೆಂದು ನಿರ್ಧರಿಸಿದ್ದರು. ಕೆಲವು ದಿನಗಳ ತರುವಾಯ ಯೋಚಿಸುತ್ತಿರುವಾಗ "ನಮ್ಮ ಕುಟುಂಬದಲ್ಲಿ ಯಾರೂ ಓದಿದವರಿಲ್ಲ, ಇಬ್ಬರನ್ನು ಮಾತ್ರ ಶಾಲೆಗೆ ಸೇರಿಸಿದೆ. ಅದರಲ್ಲಿ ಒಬ್ಬ ಫೇಲಾಗಿ ಮನೆಯಲ್ಲಿ ಉಳಿದ, ಇನ್ನೊಬ್ಬ ಪರೀಕ್ಷೆಯಲ್ಲಿ ಪಾಸಾಗಿದ್ದಾನೆ. ಇವನನ್ನು ಮುಂದೆ ಓದಿಸಿದರೆ, ದೂರದ ಒರಿಸ್ಸಾ, ತಮಿಳುನಾಡಿನ ದನಗಳ ವ್ಯಾಪಾರಿಗಳಿಂದ ಬರುವ ಆಂಗ್ಲಭಾಷೆಯ ಪತ್ರಗಳನ್ನು ಓದಿಸಲು ಅನುಕೂಲವಾಗಬಹುದೆಂದು ನಿರ್ಧರಿಸಿ, ಈ ಎಲ್ಲಾ ಕಾರಣಗಳಿಂದ ನಾರಾಯಣನನ್ನು 8ನೇ ತರಗತಿಗೆ ಸಮೀಪದ ವರ್ತೂರಿನ ಪ್ರೌಢಶಾಲೆಗೆ ಸೇರಿಸಿದರು.

ಅಲ್ಲಿಯವರೆಗೂ ಕನ್ನಡ ಮಾಧ್ಯಮದಲ್ಲಿಯೇ ಕಲಿತಿದ್ದ ನಾರಾಯಣನಿಗೆ ಇಲ್ಲಿ ಇಂಗ್ಲಿಷ್ ಅಭ್ಯಾಸ ಮಾಡುವುದು 'ನೀರಿಳಿಯದ ಗಂಟಲಿನಲ್ಲಿ ಕಡುಬು ತುರುಕಿದಂತಾಯ್ತು'. ಆದರೆ ಶಾಲೆಯ ಮುಖ್ಯೋಪಾಧ್ಯಾಯರಾದ 'ಶ್ರೀ ಪಾಲದಾರ್ ರಾಜ್' ಅವರು ಗ್ರಾಮೀಣ ಭಾಗದ ಮಕ್ಕಳ ಮನಸ್ಥಿತಿಯನ್ನು ಅರಿತುಕೊಂಡಿದ್ದರಿಂದ ಶಾಲೆಯ ಶಿಕ್ಷಕರಿಗೆ ತಾವುಗಳೆಲ್ಲಾ ಶಾಲಾ ಅವಧಿಯ ನಂತರ ಅರ್ಧಗಂಟೆಯವರೆಗೆ ವಿಶೇಷ ತರಗತಿಗಳನ್ನು ತೆಗೆದುಕೊಳ್ಳಲು ವಿನಂತಿಸಿದಾಗ ಅವರೆಲ್ಲರೂ ಒಪ್ಪಿಕೊಂಡು ಕಾರ್ಯನಿರತರಾದರು. ಇಂಗ್ಲಿಷ್ ಶಿಕ್ಷಕರಾದ 'ಶ್ರೀ ಸುಬ್ರಹ್ಮಣ್ಯ ಮಾಸ್ಟರ್' ಹಾಗೂ ರಾಜಕಾರಣಿಗಳಾದ ವರ್ತೂರ ಪ್ರಕಾಶರವರ ತಂದೆಯವರಾದ 'ಶ್ರೀ ರಾಮಸ್ವಾಮಿ'ಯವರು ಇಂಗ್ಲಿಷ್ ಪಾಠಗಳನ್ನು ಹೇಳಿಕೊಡುತ್ತಿದ್ದರಿಂದ ನಾರಾಯಣನಿಗೆ ಪರೀಕ್ಷೆಯಲ್ಲಿ ವಿಷಯಗಳು ಕಠಿಣವಾಗದೆ ಪ್ರತಿ ವರ್ಷ ಪಾಸಾಗುತ್ತಾ ಹತ್ತನೇ ತರಗತಿಗೆ ಬಂದು ತಲುಪಿದನು. ಇಲ್ಲಿ ಶಿಕ್ಷಕರ ಸೇವಾ ಮನೋಭಾವದ ಗುಣದಿಂದ, ಅವರ ಕರ್ತೃತ್ವದ ಶಕ್ತಿಯಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಜೀವನದ ದಾರಿದೀಪಗಳಾಗಿದ್ದರು.

ವರ್ತೂರಿನ ಪ್ರೌಢಶಾಲೆಯ ಮಕ್ಕಳು ಪರೀಕ್ಷೆ ಬರೆಯಲು ಬೆಂಗಳೂರಿಗೆ ಬರಬೇಕಾಗಿತ್ತು. ಇತ್ತ ಮತ್ಸರ ಸಹೋದರನು ಪರೀಕ್ಷೆಯಲ್ಲಿ ನಪಾಸಾಗಿ ಪಾಸಾದ ನಾರಾಯಣನಿಗೆ ಮತ್ತಷ್ಟು ಕಿರುಕುಳ ನೀಡಲಾರಂಭಿಸಿದನು. ಈರ್ಷೆಭಾವ ಎಷ್ಟಾಗಿತ್ತೆಂದರೆ, ಪರೀಕ್ಷೆ ಬರೆಯಲು ಪೆನ್ನು ಕೊಡಿಸಬೇಕೆಂದು ತಂದೆಯನ್ನು ಕೇಳಿದರೆ, ಮತ್ಸರದ ಅಣ್ಣನು ಪೆನ್ನಿನ ಅವಶ್ಯಕತೆಯಿಲ್ಲ, ಪೆನ್ಸಿಲ್ ಕೊಡಿಸಿದರೆ ಸಾಕು ಎಂದು ತಂದೆಗೆ ಸಲಹೆ ಕೊಟ್ಟಿದ್ದರಿಂದ ಪೆನ್ಸಿಲ್ ಕೊಡಿಸಲು ಮುಂದಾದ ತಂದೆಯವರ ಹತ್ತಿರ ನಾರಾಯಣ ಕಣ್ಣೀರಿನ ಕೋಡಿ ಹರಿಸಿದ್ದರಿಂದ ತಂದೆಯ ಮನಕರಗಿ ಆರಾಣೆಯನ್ನು ಅಂದಿನ ಕಾಲದಲ್ಲಿ ಪ್ರಸಿದ್ಧವಾಗಿದ್ದ 'ಲಕ್ಸ್' ಪೆನ್ನು ಕೊಳ್ಳಲು ಹಾಗೂ ಖರ್ಚಿಗೆಂದು ನಾಲ್ಕಾಣೆ ಹಣ ನೀಡಿದರು. ಪರೀಕ್ಷೆ ಬರೆಯಲು ಬೆಂಗಳೂರಿನ 'ಯುನೈಟೆಡ್ ಮಿಷನ್' ಶಾಲೆಯಲ್ಲಿ ಉತ್ತಮ ರೀತಿಯಲ್ಲಿ ಅಧ್ಯಯನ ಮಾಡಿದ್ದರಿಂದ

ಪರೀಕ್ಷೆ ಬರೆಯಲು ಕಷ್ಟವಾಗಲಿಲ್ಲ. ಪರೀಕ್ಷೆ ಮುಗಿಸಿ ಮನೆಗೆ ಬಂದು ಖರ್ಚಿಗೆಂದು ಕೊಟ್ಟಿದ್ದನ್ನು ಹೇಗೆ ಬಳಸಬೇಕೆಂದು ಗೊತ್ತಾಗದೆ ಮರಳಿ ತಂದೆಯವರಿಗೆ ಕೊಟ್ಟರು. ಕೆಲವೇ ದಿನಗಳಲ್ಲಿ ಫಲಿತಾಂಶ ಬಂತು, ನಾರಾಯಣನು ಶೇಕಡಾ 40 ಅಂಕಗಳನ್ನು ಪಡೆದು ಪಾಸಾಗಿದ್ದು ಮನೆಮಂದಿಗೆಲ್ಲ ಒಂದು ರೀತಿಯ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಸುತ್ತಲಿನ ಯಾವ ಹಳ್ಳಿಯ ಹುಡುಗರು ಬೆಂಗಳೂರಿಗೆ ಹೋಗಿ ಪಾಸಾಗಿರಲಿಲ್ಲ. ತಮ್ಮ ಮಗ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದು ತಂದೆಗೆ ಹೆಮ್ಮೆಯ ವಿಷಯವಾಗಿತ್ತು. ಈ ಸುದ್ದಿ ತಿಳಿದ ಪ್ರತಿಷ್ಠಿತ ಐಟಿಐ ಕಂಪನಿಯವರು ನಿಮ್ಮ ಮಗನಿಗೆ ತಿಂಗಳಿಗೆ ಉತ್ತಮ ಸಂಬಳ ಕೊಡುತ್ತೇವೆಂದು ಲಕ್ಷ್ಮಯ್ಯ ರೆಡ್ಡಿಯವರನ್ನು ಕೇಳಿಕೊಂಡಾಗ; ಅವರ ಮಾತುಗಳನ್ನು ಕೇಳಿಸಿಕೊಂಡು ಸಿಟ್ಟು ತಡೆದುಕೊಳ್ಳಲಾರದೆ, “ಏದ್ದೊಳ್ರಯ್ಯಾ ಮ್ಯಾಕೆ, ಕೆಲ್ಸ ಕೊಡ್ತಾರಂತೆ ಕೆಲ್ಸಾ; ನಾವು ರೈತರು, ಕಷ್ಟಪಟ್ಟು ನಮ್ಮ ಭೂಮಿಯಲ್ಲಿ ದುಡೀತೀವಿ, ನಿಮ್ಮ ಹಂಗಿನಲ್ಲಿ ದುಡಿಯೋ ದರ್ದು ನಮಗಿಲ್ಲಲ, ಬೇಕಾದರೆ ನೀವೇ ಬನ್ನಿ ಕೈ ತುಂಬಾ ಸಂಬಳ ಕೊಟ್ಟು, ಹೊಟ್ಟೆ ತುಂಬಾ ಊಟ ನೀಡಿ, ಜೊತೆಗೆ ಉಳಿದುಕೊಳ್ಳಲಿಕ್ಕೆ ಮನೇನೂ ಕೊಡ್ತೀನಿ, ನನ್ನ ಮಗನನ್ನು ಯಾವ ಕೆಲಸಕ್ಕೂ ಕಳಿಸಲ್ಲ ಹೋಗಿ” ಎಂದು ಜೋರಾಗಿ ಗದರಿಸಿ ಮಾತನಾಡಿದಾಗ ಬಂದವರೆಲ್ಲಾ ಪೆಚ್ಚುಮೋರೆ ಹಾಕಿಕೊಂಡು ಹೋಗುವಂತಾಯ್ತು.

ಎಸ್.ಎಸ್.ಎಲ್.ಸಿ ಮುಗಿಸಿದ ನಾರಾಯಣನನ್ನು ಹಿರಿಯ ಅಣ್ಣನಾದ ರಾಮಯ್ಯ ರೆಡ್ಡಿಯು ಇಂಜಿನೀಯರ್ ಮಾಡಬೇಕೆಂಬ ಆಸೆಯಿಂದ, ತಮ್ಮನ್ನನ್ನು ಹತ್ತಿರ ಕರೆದು ನಮಗಂತೂ ಅಪ್ಪಯ್ಯ ಶಾಲೆಗೆ ಕಳುಹಿಸಲಿಲ್ಲ. ನಾವು ವ್ಯವಸಾಯ ನೋಡಿಕೊಂಡು ಹೋಗ್ತೀವಿ, ನೀನು ಒಳ್ಳೆಯ ಇಂಜಿನೀಯರ್ ಆಗಬೇಕೆಂದು ಹಿತನುಡಿಗಳನ್ನಾಡಿದರು. ಅಂದಿನ ‘ಇಂಡಿಯನ್ ಕೌನ್ಸಿಲ್ ಫಾರ್ ಅಗ್ರಿಕಲ್ಚರ್ ರಿಸರ್ಚ್ (ಐಸಿಎಆರ್)’ ನಲ್ಲಿ ಸರ್ಟ್ ಡೈರೆಕ್ಟರ್ ಜನರಲ್‌ರಾಗಿ ಸೇವೆ ಸಲ್ಲಿಸಿದ್ದ ಡಾ. ಕೆಂಪಣ್ಣನವರನ್ನು ಭೇಟಿಯಾಗಿ ಅವರ ಸಲಹೆಯಂತೆ, ತಮ್ಮ ಮನೆಯಲ್ಲಿಯೇ ಆಶ್ರಯ ನೀಡುವ ಭರವಸೆ ಕೊಟ್ಟರು. ನಾರಾಯಣನಿಗೆ ಗಣಿತ ಕಬ್ಬಿಣದ ಕಡಲೆಯಾಗಿದ್ದರಿಂದ ಭೌತಶಾಸ್ತ್ರದ ಇಂಜಿನೀಯರ್ ಕಲಿಯಲು ನಿರ್ಧರಿಸಿದರು. ಆದರೆ ವಿಧಿಯ ಯೋಚನೆ ಬೇರೆಯಾಗಿತ್ತು. ಆಶ್ರಯ ನೀಡಿದ್ದ ಡಾ. ಕೆಂಪಣ್ಣನವರು ಮೂರೇ ತಿಂಗಳಲ್ಲಿ ದೆಹಲಿಗೆ ವರ್ಗವಾಗಿ ಹೋಗಿದ್ದರಿಂದ ಅಣ್ಣನಿಗೆ ಪರಿಚಯವಿದ್ದ ಬಾಳೆಮಂಡಿಯ ಎನ್ ಗುರಪ್ಪನವರ ಮನೆಯಲ್ಲಿ ಆಶ್ರಯ ಸಿಕ್ಕಿತು. ಆದರೆ ಗುರಪ್ಪನವರು ದೊಡ್ಡ ವ್ಯಾಪಾರಸ್ಥರಾಗಿದ್ದರು. ದುರಾದೃಷ್ಟದಿಂದ ಅವರ ಮಗ ಅಂಗಡಿಯಲ್ಲಿ ವ್ಯವಹಾರಕ್ಕೆ ಕೂರಿಸಿದರೆ ಕಳ್ಳತನ ಮಾಡಿ ತಂದೆಯವರ ನಂಬಿಕೆಗೆ ದ್ರೋಹ ಎಸಗುತ್ತಿದ್ದರಿಂದ ತಾವೇ ನೋಡಿಕೊಂಡು ಹೋಗುತ್ತಿದ್ದರು.

ಆಶ್ರಯ ಪಡೆದಿದ್ದ ನಾರಾಯಣನು ಕೆಲವೇ ದಿನಗಳಲ್ಲಿ ಗುರಪ್ಪನವರ

ನಂಬಿಕೆಯ ವ್ಯಕ್ತಿಯಾಗಿಬಿಟ್ಟನು. ಈ ಕಾರಣದಿಂದ ತಮ್ಮ ವ್ಯವಹಾರಕ್ಕೆ ಹೊರಹೋದಾಗ ಬೆಳಗ್ಗೆ 07 ರಿಂದ 9:30 ರವರೆಗೆ ಅಂಗಡಿಯಲ್ಲಿದ್ದು ನಂತರ ಕಾಲೇಜಿಗೆ ಹೋಗುತ್ತಿದ್ದನು. ಕೆಲವೊಮ್ಮೆ 10-11 ಗಂಟೆಯವರೆಗೂ ಅಂಗಡಿಯಲ್ಲಿಯೇ ಇರಬೇಕಾಗಿತ್ತು. ಅಲ್ಲದೆ ಗುರಪ್ಪನವರು ನಾಲ್ಕಾಣೆಯ ಸಂಬಳವನ್ನು ನೀಡುತ್ತಿದ್ದರಿಂದ ನಾರಾಯಣನಿಗೆ ಅಂಗಡಿಯ ಮೋಜು, ವ್ಯವಹಾರಕ್ಕೆ ಬಂದ ಜನರ ಪರಿಚಯ ಮಾಡಿಕೊಳ್ಳುವುದು, ಸಿಗುವ ನಾಲ್ಕಾಣೆಯಲ್ಲಿ ಇಷ್ಟದ ದೋಸೆ ತಿನ್ನುವುದು, ಸಿನೆಮಾ ನೋಡುವ ಚಟ ಹೀಗೆ ನಗರದ ಆಕರ್ಷಣೆಗೊಳಗಾಗಿ ಓದಿನಲ್ಲಿ ಆಸಕ್ತಿ ಕಳೆದುಕೊಂಡು ಕಾಲೇಜು ಹೋಗಿ ಪಾಠ ಕೇಳುವುದು ಕಿರಿಕಿರಿ ಎನಿಸಿ ಮನಸ್ಸು ದುರಭ್ಯಾಸದತ್ತ ಸೆಳೆದುಕೊಂಡು ಹೋಯಿತು. ತನ್ನ ಹಳೆಯ ಪುಸ್ತಕಗಳನ್ನು ಮಾರಿ ಸಿನೆಮಾ ನೋಡುವುದು, ದೋಸೆ ತಿನ್ನಲು ಖರ್ಚು ಮಾಡುತ್ತಿದ್ದರು. ಕೋರ್ಟಿನ ಮುಂದೆ ಹೋಗಿ ನಿಲ್ಲುವುದೆಂದರೆ ತುಂಬಾ ಆಸಕ್ತಿ. ಏಕೆಂದರೆ ಅಲ್ಲಿ ಸುಬ್ಬಾರಾವ್ ಎಂಬ ವಕೀಲರೊಬ್ಬರು ಸಿಗರೇಟ್ ಸೇದುವ ಭಂಗಿಯನ್ನು ನೋಡುವುದರ ಜೊತೆಗೆ ಪೊಲೀಸರು ವೇಶ್ಯಾವಾಟಿಕೆ ನಡೆಸುತ್ತಿದ್ದ ಸ್ತ್ರೀಯರನ್ನು ಕೋರ್ಟಿಗೆ ಹಾಜರುಪಡಿಸಲು ಕರೆತರುತ್ತಿದ್ದರಿಂದ ಅವರ ಮುಖ ನೋಡುವ ಚಪಲದಿಂದ ಕೋರ್ಟ್ ಮುಂದೆ ಆಗಾಗ ಹಾಜರಾಗುತ್ತಾ ಓದಿಗೆ ತಿಲಾಂಜಲಿಯಿಟ್ಟರು.

ಅಂಗಡಿಯ ಮಾಲಕರು ಆಶ್ರಯ ನೀಡುವುದರ ಜೊತೆಗೆ ನಾಲ್ಕಾಣೆ ಸಂಬಳ ನೀಡುತ್ತಿದ್ದರು ಅದು ನಾರಾಯಣನ ದುಶ್ಚಟಗಳಿಗೆ ಸಾಕಾಗದೆ ಪುಸ್ತಕಗಳನ್ನು ಕದಿಯುವುದನ್ನು ಕಲಿತುಕೊಂಡನು. ಒಂದು ಸಲ ಪುಸ್ತಕ ವ್ಯಾಪಾರಿ ಹತ್ತಿರ ಪುಸ್ತಕ ಕೊಳ್ಳುವನಂತೆ ನಟಿಸಿ ಕಳ್ಳತನ ಮಾಡಿದನು. ಇದನ್ನು ಆ ವ್ಯಾಪಾರಿ ಗಮನಿಸುತ್ತಿದ್ದ ಓಡಿ ಹೋಗುತ್ತಿದ್ದ ಇವನನ್ನು ತಕ್ಷಣವೇ ಹಿಡಿದರೆ, ತನ್ನ ಮೊಂಡುವಾದ ಪ್ರದರ್ಶಿಸಿ ತನ್ನದೇ ಪುಸ್ತಕವೆಂದು ವಾದ ಮಾಡಿದ್ದಲ್ಲದೆ, ಸಮೀಪದ ಪೊಲೀಸ್ ಠಾಣೆಗೆ ವ್ಯಾಪಾರಿಯ ಸಮೇತ ಈ ಪೋಲಿ ಹುಡುಗ ಹೋದನು. ಇವರಿಬ್ಬರ ವಾದ ಆಲಿಸಿದ ಪೊಲೀಸರು ಹುಡುಗನಿಗೆ ನಾಲ್ಕು ಬಾರಿಸಿ ತನ್ನ ತಪ್ಪು ಒಪ್ಪಿಕೊಂಡು ಕದ್ದ ಪುಸ್ತಕಗಳನ್ನು ವ್ಯಾಪಾರಿಗೆ ಮರಳಿಸಿದ್ದರಿಂದ ಅವನು ಹೋದನು. ಇತ್ತ ಪೊಲೀಸರು ಸಾವಧಾನದಿಂದ "ಲೇ ಹುಡುಗ ಇಷ್ಟು ಚಿಕ್ಕ ವಯಸ್ಸಿನಲ್ಲಿ ಕಳ್ಳತನ ಯಾಕೆ ಕಲಿತೆ? ಏನ್ ಮಾಡ್ತೀಯೋ ದುಡ್ಡು ತಗೊಂಡು?" ಎಂದು ಪ್ರೀತಿಪೂರ್ವಕವಾಗಿ ಕೇಳಿದಾಗ 'ದೋಸೆ ತಿಂತೀನಿ ಸರ್' ಎಂದು ಒಂದೇ ಉಸುರಿಗೆ ಉಸಿರಿದ. ಕಳ್ಳತನ ಮಾಡುವುದು ತಪ್ಪೆಂದು ಬುದ್ಧಿವಾದ ಹೇಳಿ ಅವರೇ ಹೋಟೆಲಿಗೆ ಕರೆದುಕೊಂಡು ಹೋಗಿ, ದೋಸೆ ತಿನ್ನಿಸಿ ಜೊತೆಗೆ ಎರಡಾಣೆಯನ್ನು ಕೊಟ್ಟು ಕಳುಹಿಸಿದರು.

ಇಂಥ ಪೋಲಿ ಕೆಲಸಗಳಲ್ಲಿಯೇ ನಿರತನಾಗಿದ್ದರಿಂದ ಓದಿನಲ್ಲಿ ಗಮನವೀಯದೆ ಪರೀಕ್ಷೆಯಲ್ಲಿ ಫೇಲಾದರೂ ಮನೆಯಲ್ಲಿ ಪಾಸಾಗಿದ್ದೆನೆಂದು ಸುಳ್ಳು

ಹೇಳಿದ್ದಲ್ಲದೇ, ಎರಡನೇ ವರ್ಷಕ್ಕೆ ಪ್ರವೇಶವನ್ನು ಪಡೆದು ಮತ್ತೆ ಅದೇ ಕೆಟ್ಟ ಮಾರ್ಗದಲ್ಲಿಯೇ ಅಂಕೆಯಿಲ್ಲದ ಕುದುರೆಯಂತೆ ರಾಜಾರೋಷವಾಗಿ ತಿರುಗಿ ಪರೀಕ್ಷೆಯಲ್ಲಿ ಮತ್ತೇ ಅನುತ್ತೀರ್ಣನಾಗಿದ್ದನು. ನಾರಾಯಣನ ಈ ಅವಾಂತರಗಳಿಗೆ ಕೊಕ್ಕೆ ಹಾಕಲು ಪಕ್ಕದ ಹಳ್ಳಿಯ ವೆಂಕಟರಮಣಪ್ಪ ಎಂಬ ವಿದ್ಯಾರ್ಥಿಯ ಮೂಲಕ ಅಣ್ಣ ರಾಮಯ್ಯನು ಎಲ್ಲವನ್ನು ತಿಳಿದುಕೊಂಡರು. ನಾರಾಯಣನನ್ನು ಊರಿಗೆ ಕರೆಯಿಸಿ ಬಾಸುಂಡೆ ಬರುವಂತೆ ಹೊಡೆತಗಳ ಕಡುಬು ತಿನಿಸಿ, ಓದಲು ಲಾಯಕ್ಕಿಲ್ಲವೆಂದು ಮನೆಯಲ್ಲಿರುವ ಕುರಿ-ಆಡು-ಕತ್ತೆಗಳನ್ನು ಕಾಯುವ ಕಾಯಕಕ್ಕೆ ನೂಕಿದರೆ ಖುಷಿಯಿಂದ ಸ್ವೀಕರಿಸಿ ಕಾರ್ಯನಿರತನಾದನು. ಕುರಿ ಕಾಯುವಾಗ ಎಂಟು ಕಿಲೋ ಮೀಟರ್ ದೂರದಲ್ಲಿ ರೈಲು ಹೋಗುವುದನ್ನು ನೋಡಬೇಕೆಂಬ ಬಯಕೆಯಿಂದ ತನ್ನ ಕುರಿ ಸೈನ್ಯ ಸಹಿತವಾಗಿ ಹಾಜರಾದನು. ಒಂದು ಗೂಡ್ಸ್ ರೈಲು ಹೋಗಿದ್ದನ್ನು ಕಂಡು ಖುಷಿಯಲ್ಲಿ ತೇಲಾಡಿದ್ದಲ್ಲದೆ, ನಾಲ್ಕು ಗಂಟೆಗೆ ಬರುವ ಇನ್ನೊಂದು ಪ್ಯಾಸೆಂಜರ್ ರೈಲನ್ನು ನೋಡಿಯೇ ಹೋಗಲು ನಿರ್ಧರಿಸಿದನು. ಆದರೆ ಅಂದು ಸರಿಯಾದ ಸಮಯಕ್ಕೆ ಬಾರದೇ ಒಂದುವರೆ ಗಂಟೆ ವಿಳಂಬವಾಗಿ ಬಂದಿತು. ಆನಂದದಿಂದ ಕಣ್ತುಂಬಿಕೊಂಡು ಸೂರ್ಯದೇವನು ತನ್ನ ಮನೆಯತ್ತ ಹೆಜ್ಜೆ ಹಾಕುತ್ತಿದ್ದ; ನಾರಾಯಣನಿಗೆ ಒಂದು ಕ್ಷಣ ದಿಗಿಲುಗೊಂಡು ತನ್ನ ಮನೆಯತ್ತ ಹೆಜ್ಜೆ ಹಾಕುವ ಚಿಂತೆಯಿಂದ ಅವಸರವಸರವಾಗಿ ಕುರಿ ಸೈನ್ಯವನ್ನು ಓಡಿಸುತ್ತಾ ತುಂಬಾ ತಡವಾಗಿ ಮನೆಗೆ ಬಂದನು. ಇತ್ತ ಮಗ ಬರದಿದ್ದರಿಂದ ಕುಟುಂಬದ ಸದಸ್ಯರೆಲ್ಲರೂ ಗಾಬರಿ-ಭಯದಲ್ಲಿ ಮುಳುಗಿದ್ದರು. ತಂದೆಯವರಿಗೆ ಕೋಪ ತಡೆಯಲಾಗದೆ ಬೆತ್ತ ತೆಗೆದುಕೊಂಡು ಮನಸೋಇಚ್ಛೆಯಿಂದ ಬಾರಿಸಿ, ಕೃಶದೇಹದ ಹುಡುಗನನ್ನು ಸಾಯಿ ಎಂದು ಹತ್ತು ಅಡಿ ಮೇಲಕ್ಕೆ ಎಸೆದರು. ತಕ್ಷಣವೇ ಜಾಗೃತ ಮನಸ್ಸಿನ ಅಣ್ಣನೊರ್ವನು ನೆಲಕ್ಕೆ ಬೀಳುತ್ತಿದ್ದವನನ್ನು ಎತ್ತಿಹಿಡಿದಿದ್ದರಿಂದ ಜೀವ ಉಳಿಯಿತು. ತಂದೆಯ ಕೋಪ ಎಷ್ಟು ಹೊತ್ತು ಇರಲು ಸಾಧ್ಯ, ಸ್ವಲ್ಪ ಸಮಯದ ಬಳಿಕ ದುಡುಕಿ ಹೊಡೆದು ಬಿಟ್ಟೆ ಎಂದು ಮರುಕಪಟ್ಟು ಕಡಲೆಬೀಜ ಮತ್ತು ಬೆಲ್ಲವನ್ನು ಪ್ರೀತಿಯಿಂದ ಮಗನಿಗೆ ತಿನಿಸಿ ಸಮಾಧಾನ ಮಾಡಿದರು. ಇದು ಅಲ್ಲವೇ ಅಪ್ಪ-ಮಕ್ಕಳ ಪ್ರೀತಿ. ನಾರಾಯಣನ ಅಂದಿನ ಅದೃಷ್ಟವೆಂದರೆ ರಾತ್ರಿಯಲ್ಲಿ ಕುರಿಗಳನ್ನು ಮನೆಯತ್ತ ಬರುವಾಗ ನಡುವೆ ತೋಳಗಳ ಸೈನ್ಯ ಭೇಟಿಯಾಗಿರಲಿಲ್ಲ.

ಅಂದಿನ ಘಟನೆಯು ತಂದೆಯ ಏಟಿಗಿಂತಲೂ ಮನೆಯ ದಾಯಾದಿಗಳು ನಾರಾಯಣನನ್ನು ಅಂದಿನ ಸಂದರ್ಭವನ್ನು ನೆನಪಿಸಿ ಗೇಲಿ ಮಾಡುತ್ತಿದ್ದರಿಂದ ಸೂಕ್ಷ್ಮ ಮನಸ್ಸಿನ ನಾರಾಯಣನಿಗೆ ತೀವ್ರವಾಗಿ ಅವಮಾನವಾಗಿ ಆತ್ಮಗೌರವಕ್ಕೆ ಪೆಟ್ಟುಬಿದ್ದು ಮನೆಯು ಜೈಲಿನಂತೆ ಭಾಸವಾಗುವಂತಾಯಿತು. ಕುಟುಂಬದ ಸದಸ್ಯರು ಶತ್ರುಗಳಂತೆ ಕಾಣತೊಡಗಿದರು. ಹೀಗಾಗಿ ಒಂದು ಇರುಳಿನ ಹನ್ನೊಂದು ಗಂಟೆಯ

ಸಮಯದಲ್ಲಿ ತಂದೆ-ತಾಯಿ-ಅಣ್ಣ-ಅಕ್ಕ-ತಂಗಿಯರೆಲ್ಲರನ್ನೂ ಗಟ್ಟಿ ಮನಸ್ಸಿನಿಂದ ತೊರೆದು, ಎಲ್ಲಿಗೆ? ಯಾವ ದಿಕ್ಕು? ಏನು ಮಾಡುವುದು? ಇದರ ಯಾವುದರ ಪರಿವೆಯಿಲ್ಲದೆ ನಿಶಾಚರ ಪ್ರಾಣಿಯಂತೆ ಒಂದು ಹಾದಿ ಹಿಡಿದುಕೊಂಡು "ಮರಳಿ ಮನೆಗೆ ಬರುವುದಾದರೆ ಬದುಕಿನಲ್ಲಿ ಉದ್ಧಾರವಾಗಿಯೇ ಬರಬೇಕೆಂದು" ಕಾಲು ತೋಚಿದತ್ತ ಹೆಜ್ಜೆ ಹಾಕುತ್ತಾ ಬೆಳಗಿನ ಜಾವ ನಾಲ್ಕು ಗಂಟೆಗೆ ಬೆಂಗಳೂರಿನ ಕಾರ್ಪೊರೇಷನ್ ಬಸ್ ನಿಲ್ದಾಣವನ್ನು ತಲುಪಿದನು. ರಾತ್ರಿಯೆಲ್ಲಾ ನಡೆದು ಬಂದಿದ್ದರಿಂದ ಬಸವಳಿದು ಹೋಗಿದ್ದ ನಾರಾಯಣನಿಗೆ ತಡೆಯಲಾರದಷ್ಟು ಹಸಿವು ಹೆಚ್ಚಿತು. ಭಿಕ್ಷೆ ಬೇಡಬೇಕೆಂದರೆ ಕುಟುಂಬದ ಗೌರವದ ಜೊತೆಗೆ ತಂದೆಯವರು ಯಾವಾಗಲೂ "ಮನುಷ್ಯ ಜೀವನದಲ್ಲಿ ಏನನ್ನಾದರೂ ಬೇಡಬಹುದು, ಆದರೆ ಅನ್ನವನ್ನಲ್ಲ" ಎಂಬ ಮಾತು ನೆನಪಾಗಿ ಭಿಕ್ಷೆಯ ಯೋಚನೆಯಿಂದ ದೂರ ಸರಿದರು. ಎರಡು ದಿನಗಳವರೆಗೆ ಹಸಿವಿನಿಂದ ಕಂಗಾಲಾಗಿ ಒಂದೇ ಕಡೆ ಕುಳಿತಿದ್ದರು. ಆ ಸಂದರ್ಭದಲ್ಲಿ ತಮಿಳಿನ ವ್ಯಕ್ತಿಯೊಬ್ಬರು ವಿಚಾರಿಸಿದಾಗ ತನ್ನೆಲ್ಲಾ ವಿಚಾರವನ್ನು ಹೇಳಿದ, ಅಯ್ಯೋ ಎಂಥ ಕೆಲಸ ಮಾಡಿಬಿಟ್ಟೆ, ತಪ್ಪು ಮಾಡಿದಾಗ ದೊಡ್ಡರೋ ದಡ್ಡರಾಗಿ ಒಂದೆರಡು ಏಟು ಹಾಕಿದ್ದಕ್ಕೆ ಮನೆಬಿಟ್ಟು ಬರುವುದು ತಪ್ಪೆಂದು ಬುದ್ಧಿ ಹೇಳಿದರೆ, ಯಾವುದೇ ಕಾರಣಕ್ಕೂ ಮನೆಗೆ ಮರಳಿ ಹೋಗುವುದಿಲ್ಲವೆಂದು; ನೀವೇ ನಿಮ್ಮ ಮನೆಗೆ ಕರೆದುಕೊಂಡು ಹೋಗಿ ನೀವು ಹೇಳಿದ ಕೆಲಸ ಮಾಡ್ತೀನಿ, ಊಟ ಹಾಕಿ ಎಂದು ದುಂಬಾಲು ಬೀಳಲು ಆ ವ್ಯಕ್ತಿಗೆ 'ಬೀದಿಲಿ ಹೋಗೋ ಮಾರಮ್ಮನಿಗೆ ನಮ್ಮ ಮನೆಗೆ ಸ್ವಲ್ಪ ಬಾರಮ್ಮ' ಎನ್ನುವಂತಾಗಿ ಸ್ವಲ್ಪ ಯೋಚಿಸಿದ ನಂತರ ತನಗೆ ಪರಿಚಯದ ಹೋಟೆಲ್ ಮಾಲಿಕರೊಂದಿಗೆ ಮಾತನಾಡಿ ಇವನಿಗೆ ಊಟ ಕೊಡಿ ಸಂಬಳವೇನು ಬೇಡವೆಂದು ಹೋಟೆಲ್ ಕ್ಲೀನರ್ ಆಗಿ ಸೇರಿಕೊಂಡರು.

ಕೆಲಸಕ್ಕೆ ಸೇರಿ ಮೂರು ಗಂಟೆಗಳಾಗಿದ್ದವು ಅಷ್ಟೆ. ಹೋಟೆಲ್‌ನವರು ಕೊಟ್ಟ ತಿಂಡಿಯನ್ನು ತಿಂದು, ತನ್ನ ವಹಿಸಿದ ಕ್ಲೀನರ್ ಕೆಲಸಕ್ಕೆ ಹಾಜರಾದರು. ಕಿಲುಬುಗಟ್ಟಿ ಗಬ್ಬುನಾರುತ್ತಿದ್ದ ಹೋಟೆಲಿನ 150 ಕಾಫಿ ಗ್ಲಾಸ್‌ಗಳು, ಟೆಬಲ್ ಒರೆಸುವ ಬಟ್ಟೆಗಳನ್ನೆಲ್ಲಾ ಎರಡು-ಮೂರು ಸಾರಿ ಬೂದಿಯನ್ನು ತೆಂಗಿನ ನಾರಿನಿಂದ ಹಚ್ಚಿ ತಿಕ್ಕಿ ತಿಕ್ಕಿ ಸ್ವಚ್ಛಗೊಳಿಸಿದರು. ಗಬ್ಬುನಾತ ಹೊಡೆಯುತ್ತಿದ್ದ ಮೇಜುಗಳನ್ನು ಅರಿವೆಯಿಂದ ಉಜ್ಜಿ ಅವುಗಳನ್ನು ಪಾವನಗೊಳಿಸುವುದರ ಮೂಲಕ ನಾರಾಯಣ ತನ್ನ ವೃತ್ತಿ ಜೀವನ ಆರಂಭಿಸಿದನು.

ಹೋಟೆಲಿನಲ್ಲಿ ಹತ್ತು ಜನ ಕೆಲಸಗಾರರಿದ್ದರೂ ಅವರಿಗ್ಯಾರಿಗೂ ಸ್ವಚ್ಛತೆಯ ಪ್ರಜ್ಞೆಯಿರಲಿಲ್ಲ. ಹೊರಹೋಗಿದ್ದ ಮಾಲಕರು 'ಯಾರೋ ಈ ಗ್ಲಾಸ್‌ಗಳನ್ನು ತೊಳೆದದ್ದು?' ಎಂದು ಹಳೆ ಹುಡುಗನನ್ನು ಕೇಳಿದಾಗ ಅವನು ತಾತ್ಸಾರದಿಂದ ಅದೇ ಸಾರ್ ಹೊಸದಾಗಿ ಬಂದ ಹುಡುಗನು ಎಂದು ಉತ್ತರಿಸಿದಾಗ, ನಾರಾಯಣನನ್ನು

ಕರೆದು 'ಭೇಷ್' ಶಬ್ಬಾಸ್‌ಗಿರಿ ನೀಡಿದಾಗ ಹೆಮ್ಮೆಯೆನಿಸಿ, ಮತ್ತಷ್ಟು ಹೊಗಳಿಸಿಕೊಳ್ಳಬೇಕೆಂಬ ಆಸೆಯಿಂದ ಆಸಕ್ತಿಯಿಂದ ಕಾರ್ಯನಿರ್ವಹಿಸುತ್ತಿದ್ದರೆ, ಇತ್ತ ಹೋಟೆಲ್ ಯಜಮಾನರು ಇವನ ಶಿಸ್ತು, ಶ್ರದ್ಧೆ ಕಂಡು ಅಡುಗೆಯವರ ಹತ್ತಿರ ಚಿಕ್ಕಪುಟ್ಟ ಕೆಲಸ ಮಾಡಲು ಬಡ್ತಿ ನೀಡಿದರು. ಆದರೆ ಅದುವರೆಗೂ ಹಲವು ವರ್ಷಗಳಿಂದ ಕ್ಲೀನರಾಗಿ ಕೆಲಸ ಮಾಡುತ್ತಿದ್ದವರಿಗೆ ನಾರಾಯಣನ ಮೇಲೆ ಮತ್ಸರಭಾವ ಸುರುವಾಯಿತು. ನಿನ್ನೆ-ಮೊನ್ನೆ ಬಂದವನಿಗೆ ಬಡ್ತಿ ನೀಡಿದ್ದು, ಯಜಮಾನರು ಹೊಗಳಿದ್ದು ಅವರಿಗೆಲ್ಲಾ ಹೊಟ್ಟೆಉರಿ ಜಾಸ್ತಿಯಾಯಿತು.

ಅಡುಗೆಯ ಕೊಠಡಿಯಲ್ಲಿ ಭಟ್ಟರು ತಯಾರಿಸುವ ಖಾದ್ಯಗಳನ್ನು ಗಮನವಿಟ್ಟು ವೀಕ್ಷಿಸುತ್ತಿದ್ದ ನಾರಾಯಣ, ಒಂದು ದಿನ ಉಪ್ಪಿಟ್ಟನ್ನು ನಾನೇ ಮಾಡುತ್ತೇನೆಂದು ಹೇಳಿದಾಗ, ಭಟ್ಟರೆಲ್ಲರೂ "ಏ ಹುಡುಗಾ ಉಪ್ಪಿಟ್ಟೆಂದರೆ ಮೇಜಿನ ಮೇಲಿರುವ ಗ್ಲಾಸ್ ತೊಳೆದಷ್ಟು ಸರಳವೆಂದು ತಿಳಿದುಕೊಂಡೆಯಾ? ಸುಮ್ನಿರು ಎಂದು ಅವಕಾಶ ಕೊಡಲಿಲ್ಲ. ಒಳ್ಳೆ ಮನಸ್ಸುಳ್ಳವರಿಗೆ ಒಳ್ಳೆ ಅವಕಾಶ ಬರುತ್ತೆ ಎನ್ನುವಂತೆ, ಒಂದು ದಿನ ಉಪ್ಪಿಟ್ಟು ಮಾಡುವ ಭಟ್ಟರು ರಜೆ ಮೇಲಿದ್ದರಿಂದ ಯಜಮಾನರಲ್ಲಿ ಇವತ್ತು ನಾನು ಉಪ್ಪಿಟ್ಟು ತಯಾರಿಸುತ್ತೇನೆಂದು ವಿನಂತಿಸಿಕೊಂಡಾಗ ಹುಡುಗನ ಮೇಲಿದ್ದ ನಂಬಿಕೆಯಿಂದ ಒಪ್ಪಿದರು. ಅಂದು ನಾರಾಯಣನು ಪ್ರತಿದಿನ ಅಡುಗೆ ಮಾಡುವ ಭಟ್ಟನಿಗಿಂತ ಶೇಕಡಾ 25 ರಷ್ಟು ಕಡಿಮೆ ಎಣ್ಣೆ ಬಳಸಿ, ನಳಪಾಕದಂತೆ ರುಚಿಕಟ್ಟಾಗಿ ಉಪ್ಪಿಟ್ಟನ್ನು ತಯಾರಿಸಿಯೇ ಬಿಟ್ಟ. ಅಂದಿನಿಂದ ಉಪ್ಪಿಟ್ಟು ಮಾಡುವ ಕಾಯಕ ನಾರಾಯಣನಿಗಾಯಿತು. ಗಿರಾಕಿಗಳ ಸಂಖ್ಯೆಯು ಜಾಸ್ತಿಯಾಯಿತು. ಯಾವುದೇ ಕೆಲಸವಾದರೂ ಕೀಳೆನ್ನದೆ ನಿರ್ವಹಿಸಿದರೆ ಕಾಯಕವೇ ಕೈಲಾಸವಾಗುತ್ತದೆ ಎನ್ನುವುದಕ್ಕೆ ಇದೊಂದು ನಿದರ್ಶನ.

ಕಡಿಮೆ ಅವಧಿಯಲ್ಲಿಯೇ ಪೊಂಗಲ್, ದೋಸೆ, ಬೋಂಡಾ ಮುಂತಾದ ಪದಾರ್ಥಗಳನ್ನು ರುಚಿಯಾಗಿ ತಯಾರಿಸುವುದನ್ನು ಕಲಿತಿದ್ದರಿಂದ, ಮಾಲೀಕರು 'ಅಸಿಸ್ಟೆಂಟ್ ಕುಕ್' ಆಗಿ ನೇಮಿಸಿದರು. ಹೋಟೆಲ್ ಗ್ರಾಹಕರಿಗೆ ಇವನ ಬಗ್ಗೆ ಗೌರವಭಾವ ಹೆಚ್ಚಾದಷ್ಟು, ಸಹ ಕೆಲಸಗಾರರಿಗೆ ಅಸೂಯೆ ಜಾಸ್ತಿಯಾಯಿತು. ಆಯಗಾರರಿಗೆ ಆಯಗಾರರು ಆಗಿ ಬರುವುದಿಲ್ಲ ಎನ್ನುವಂತಾಯಿತು. ನಾರಾಯಣನಲ್ಲಿ ಒಬ್ಬ ಸಂಗೀತಗಾರನಿದ್ದ ಹೀಗಾಗಿ ಯಜಮಾನರು ದೇವರನಾಮಗಳನ್ನು ಹಾಡಿ ರಂಜಿಸುತ್ತಿದ್ದನು. ತಿಂಗಳಿಗೆ ಮೂರು ರೂಪಾಯಿ ಸಂಬಳ ನಿಗದಿಪಡಿಸಿ ಕೈಗಿತ್ತರು. ಯಾವುದೇ ಖರ್ಚಿಲ್ಲದ್ದರಿಂದ ರೇಕ್ ಪೆಟ್ಟಿಗೆಯಲ್ಲಿ ಭದ್ರವಾಗಿಡುತ್ತಾ ಬಂದರು. ಅದೇ ಹೋಟೆಲಿನ ಸಪ್ಲಯರ್ ಆಗಿದ್ದ ಶಂಕರನಾರಾಯಣ ನಾರಾಯಣನ ಹಿತೈಷಿಯಾಗಿ ಮಾರ್ಗದರ್ಶನ ನೀಡುತ್ತಿದ್ದರು. ಅದೊಂದು ದಿನ ಹೋಟೆಲ್ ಯಜಮಾನರಿಗೂ ಶಂಕರನಾರಾಯಣನಿಗೂ ಯಾವುದೋ ವಿಚಾರಕ್ಕೆ ಮನಸ್ತಾಪವಾಯಿತು. ಹೀಗಾಗಿ

ನಾರಾಯಣನಿಗೆ ಇಲ್ಲಿರುವುದು ಸರಿಯಲ್ಲ, ಇಲ್ಲಿಯ ಕೆಲಸಗಾರರು ಹೊಟ್ಟೆಕಿಚ್ಚಿನವರಾಗಿದ್ದಾರೆ. ನನ್ನ ಜೊತೆ ಬಾ ನಿನಗೆ ಒಳ್ಳೆಯ ಕಡೆ ಕೆಲಸ ಕೊಡಿಸುವ ಭರವಸೆ ಹೇಳಿದ್ದರಿಂದ ಬೆಂಗಳೂರಿನ ಪ್ರತಿಷ್ಠಿತ ಮೀನಾಕ್ಷಿ ಭವನ ಹೋಟೆಲ್‌ನಲ್ಲಿ ಕೆಲಸಕ್ಕೆ ಸೇರಿಕೊಂಡರು. ಈ ಹೋಟೆಲ್‌ನಲ್ಲಿ ಬೆಳಿಗ್ಗೆ ಐದು ಗಂಟೆಯಿಂದ ಮಧ್ಯಾಹ್ನ ಒಂದು ಗಂಟೆಯವರೆಗೆ ಮಾತ್ರ ಕೆಲಸ. ಸಂಬಳವೂ ಕೂಡ 07 ರೂಪಾಯಿಗಳಿತ್ತು. ಇದರಿಂದ ವಿಶ್ರಾಂತಿಗೆ ಸಮಯ ಸಿಗುತ್ತಿತ್ತು. ಅಲ್ಲದೆ ಕೆಲಸದ ಒತ್ತಡವು ಕಡಿಮೆಯಾಗಿತ್ತು.

ಈಗ ಗುರು ಶಂಕರನಾರಾಯಣ ಹೇಳಿದಂತೆ ನಡೆಯುತ್ತಿದ್ದ. ಮಧ್ಯಾಹ್ನ 02 ಗಂಟೆಯಿಂದ ರಾತ್ರಿ 10 ಗಂಟೆಯವರೆಗಿನ ಬಿಡುವಿನ ಸಮಯವನ್ನು ಹೇಗೆ ಸದುಪಯೋಗ ಮಾಡಬೇಕೆಂದು ಸಲಹೆ ಕೇಳಿದಾಗ, ಅದಕ್ಕೆ ಗುರುಗಳು, ನೀನು 03 ರಿಂದ 04 ಗಂಟೆಯವರೆಗೆ 'ಶ್ರೀರಾಮ ವಾಣಿಜ್ಯ ವಿದ್ಯಾಕೇಂದ್ರ'ದಲ್ಲಿ 'ಟೈಪ್‌ರೈಟಿಂಗ್' ಕಲಿಯಬೇಕೆಂದು, ಸಂಜೆ 07 ರಿಂದ 09 ಗಂಟೆಯವರೆಗೆ 'ಜಯಭಾರತಿ ಹಿಂದಿ ವಿದ್ಯಾಲಯ'ದಲ್ಲಿ ಹಿಂದಿ 'ಪ್ರಥಮ' ತರಗತಿಗಳಿಗೆ ಹಾಜರಾಗಬೇಕೆಂದು ಸೂಚಿಸಿದಾಗ ಗುರುಗಳ ಆಜ್ಞೆಯನ್ನು ಪ್ರತಿದಿನ ಅನುಷ್ಠಾನಗೊಳಿಸಿದರು. ಈ ಮಧ್ಯ 04 ರಿಂದ ಸಂಜೆ 07 ಗಂಟೆಯವರೆಗಿನ ಸಮಯವನ್ನು ವ್ಯರ್ಥವಾಗಿ ಕಳೆಯುವುದು ಹಿಂಸೆಯಂತೆ ಕಾಣಿಸಿತು. ಈ ಅಮೂಲ್ಯ ಸಮಯವನ್ನು ವ್ಯರ್ಥವಾಗಿ ಕಳೆಯದೆ ಸಮರ್ಥವಾಗಿ ಬಳಸಿಕೊಳ್ಳಬೇಕೆಂದು ನಿರ್ಧರಿಸಿದವರು, 'ನಾನೇಕೆ ಬಡಮಕ್ಕಳಿಗೆ ಪಾಠ ಹೇಳುವುದರ ಮುಖಾಂತರ ಸಮಾಜಕ್ಕೆ ಏನಾದರೂ ಕೈಲಾದಷ್ಟು ಸೇವೆ ಮಾಡಬೇಕೆಂಬ ಚಿಕ್ಕ ವಯಸ್ಸಿನ ನಾರಾಯಣನ ಮನಸ್ಸಿನಲ್ಲಿ ಮೂಡಿದ್ದೇ ತಡ ಅನುಷ್ಠಾನಗೊಳಿಸಿಯೇ ಬಿಟ್ಟರು. ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಸುತ್ತಮುತ್ತಲಿನ ಹತ್ತು-ಹನ್ನೆರಡು ಮಕ್ಕಳನ್ನು ಸೇರಿಸಿಕೊಂಡು ತರಗತಿಯನ್ನು ಆರಂಭಿಸಿದರು. ಒಬ್ಬ ಶ್ರೀಮಂತರು ತಮ್ಮ ಮಕ್ಕಳನ್ನು ಇವರಲ್ಲಿ ಕರೆತಂದು ಇಂಗ್ಲಿಷ್ ಹೇಳಿಕೊಡಿ ಎಂದು ಕೇಳಿದಾಗ "ಸಾರ್, ನನಗಿಂತಲೂ ನಿಮ್ಮ ಮಕ್ಕಳು ಚೆನ್ನಾಗಿ ಇಂಗ್ಲಿಷ್ ಬಲ್ಲವರಾಗಿದ್ದಾರೆ ಅವರಿಗೆ ಪಾಠ ಹೇಳಿಕೊಡುವಷ್ಟು ನನಗೆ ಸಾಧ್ಯವಾಗುವುದಿಲ್ಲವೆಂದು" ಹೇಳಿದಾಗ ಇವರ ಪ್ರಾಮಾಣಿಕತೆಯನ್ನು ಕಂಡು ನೀವು ಹಿಂದಿ ಭಾಷೆಯನ್ನು ಹೇಳಿಕೊಡಿ ನಿಮ್ಮಂಥ ಗುರುವಿನ ಆದರ್ಶ-ಪ್ರಾಮಾಣಿಕತೆ ನಮ್ಮ ಮಕ್ಕಳಿಗೂ ಬರಲಿ ಎಂದು ಹಿತನುಡಿಗಳನ್ನಾಡಿ ಹೋದರು.

ನಾರಾಯಣನು ಹಿಂದಿ 'ಪ್ರಥಮ' ಪರೀಕ್ಷೆಯಲ್ಲಿ ಉತ್ತೀರ್ಣನಾದ ಮೇಲೆ ಗುರು-ಮಾರ್ಗದರ್ಶಕರಾದ ಶಂಕರನಾರಾಯಣರು ಇವನು ಸಾಮಾನ್ಯವಾದವನಲ್ಲ. ಜೀವನದಲ್ಲಿ ಸಾಧಕನಾಗುವ ಲಕ್ಷಣಗಳು ಎದ್ದು ಕಾಣುತ್ತಿರುವುದನ್ನು ಮನಗಂಡು ಹೋಟೆಲ್ ಕೆಲಸ ಮಾಡುವುದನ್ನು ಬಿಡಿಸಬೇಕೆಂದು ಯೋಚಿಸುತ್ತಿದ್ದಾಗ, ಹೋಟೆಲ್‌ಗೆ

ಪರಿಚಯದ ಪೊಲೀಸರೊಬ್ಬರು ತಿಂಡಿ ತಿನ್ನಲು ಬಂದಾಗ, ಟೇಬಲ್ ಒರೆಸುವ ನಾರಾಯಣನನ್ನು ತೋರಿಸಿ, "ಈ ಹುಡುಗ ತುಂಬಾ ಬುದ್ಧಿವಂತ, ಹಿಂದಿ ಪರೀಕ್ಷೆಯಲ್ಲಿ ದಕ್ಷಿಣ ಭಾರತಕ್ಕೆ ಮೊದಲ ರ್ಯಾಂಕ್ ಬಂದಿದ್ದಾನೆ, ಇಂಗ್ಲಿಷ್ ಕೂಡ ಸ್ವಲ್ಪ ತಿಳಿದುಕೊಂಡವನಾಗಿದ್ದಾನೆ. ಇವನಿಗೆ ಎಲ್ಲಿಯಾದರೂ ಉದ್ಯೋಗ ಕಲ್ಪಿಸಿಕೊಡಿ" ಎಂದು ಧನ್ಯತೆಯಿಂದ ಶಂಕರನಾರಾಯಣರು ಬೇಡಿಕೊಂಡರು. ಪೊಲೀಸರು ವಿಳಾಸ ಕೊಟ್ಟು ಮರುದಿನವೇ ಭೇಟಿಯಾಗಲು ಹೇಳಿದ್ದರಿಂದ ನಾರಾಯಣನು ಸಮಯಕ್ಕೆ ಸರಿಯಾಗಿ ಕೊಟ್ಟ ವಿಳಾಸಕ್ಕೆ ಹೋಗಿ ಭೇಟಿಯಾದರು. ಈ ಹುಡುಗನನ್ನು ಪೊಲೀಸ ಅಣ್ಣ ತರಗುಪೇಟೆಯ ಲಾರಿ ಆಫೀಸ್‌ಗೆ ಕರೆದುಕೊಂಡು ಶೆಟ್ಟಿಯವರಿಗೆ ಇವನನ್ನು ಪರಿಚಯಿಸಿದರು. ಅವರು ಇಂಗ್ಲಿಷ್ ಓದಲು–ಬರೆಯಲು ಬರುತ್ತಾ ಎಂದು ಕೇಳಿ ಇಂಗ್ಲಿಷ್‌ನಲ್ಲಿ ವಾಕ್ಯ ಬರೆಯಲು ಸೂಚಿಸಿದಾಗ ತಪ್ಪಿಲ್ಲದೆ ದುಂಡಾಗಿ ಬರೆದಿದ್ದರಿಂದ ಅವರಿಗೆ ಖುಷಿಯಾಗಿ ಮೊದಲಿಗೆ ನಿನಗೆ ಪ್ಯೂನ್ ಕೆಲಸ ಕೊಡ್ತೀನಿ, ನಿನ್ನ ಕೆಲಸ ನೋಡಿಕೊಂಡು ಬಡ್ತಿ ಇರುತ್ತೆಂದು ಹೇಳಿ ತಿಂಗಳಿ 70 ರೂಪಾಯಿ ಸಂಬಳ ನಿಗದಿ ಮಾಡಿದ್ದರಿಂದ ನಾರಾಯಣನಿಗೆ ಇದು ಕನಸೋ–ನನಸೋ ಎನ್ನುವಂತಾಗಿ ಖುಷಿಯಲ್ಲಿ ತೇಲಾಡಿಬಿಟ್ಟ. ಈ ವಿಷಯ ತಿಳಿಸಲು ಶಂಕರನಾರಾಯಣರಿಗೆ ಕಣ್ತುಂಬಿ ಬಂತು, ನಿನ್ನ ಒಳ್ಳೆತನಕ್ಕೆ ದೇವರು ಕೃಪೆ ತೋರಿದ ನಿನಗೆ ಒಳ್ಳೆದಾಗಲೆಂದು ಬೀಳ್ಕೊಟ್ಟರು. ಅಣ್ಣ ನಾನು ನಿಮ್ಮ ಮಾರ್ಗದರ್ಶನ–ಉಪಕಾರವನ್ನು ಉಸಿರಿರುವವರೆಗೂ ನೆನೆಯುವೆ ಎಂದು ಹೇಳಿ ಹೊಸ ಹುದ್ದೆಗೆ ಹಾಜರಾದನು.

ಪಿಯುಸಿ ಓದಿಕೊಂಡರೂ ಯಾವ ಹಮ್ಮು ಬಿಮ್ಮು ಇಲ್ಲದ ನಾರಾಯಣನಿಗೆ ಪ್ಯೂನ್ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಸ್ವಲ್ಪ ಸಮಯದಲ್ಲಿಯೇ ಅಲ್ಲಿರುವ ಸಹೋದ್ಯೋಗಿಗಳ ಪ್ರೀತಿ ಗಳಿಸಿದನು. ತಿಂಗಳ ಸಂಬಳದಲ್ಲಿ 90%ರಷ್ಟು ಉಳಿಸಿ, ಅಂಚೆ ಇಲಾಖೆಯಲ್ಲಿ ಉಳಿತಾಯ ಖಾತೆ ತೆರೆದು ಹಣವನ್ನು ಉಳಿಸುತ್ತಾ ಹೋದನು. ಅದೊಂದು ಮಧ್ಯಾಹ್ನದ ಸಮಯ ಎಲ್ಲರೂ ಊಟಕ್ಕೆ ಹೋಗಿದ್ದರು. ಈ ಸಂದರ್ಭದಲ್ಲಿ ಫೋನ್ ಪದೇ ಪದೇ ರಿಂಗಣಿಸುತ್ತಿತ್ತು. ಧೈರ್ಯದಿಂದ ಫೋನ್ ಕರೆ ಸ್ವೀಕರಿಸಿದಾಗ; ಅತ್ತ ಕಡೆಯಿಂದ "ನನಗೆ ಅರ್ಜೆಂಟಾಗಿ ಹತ್ತಿ ತುಂಬಿಕೊಂಡು ನಂಜನಗೂಡಿಗೆ ಹೋಗಲು 8 ಲಾರಿಗಳು ಬೇಕಾಗಿವೆ" ನಿಮ್ಮಲ್ಲಿ ಇವೆಯೇ? ಎಂದು ಪ್ರಶ್ನಿಸಿ, ಬಾಡಿಗೆ ಹಣವೆಷ್ಟು? ಎಂದು ಕೇಳಿದಾಗ ಈ ಹುಡುಗನಿಗೆ ಯಾವುದೂ ಗೊತ್ತಿಲ್ಲ ಆದರೂ 'ಧೈರ್ಯಂ ಸರ್ವತ್ರ ಸಾಧನಂ' ಎನ್ನುವಂತೆ ನೀವು ಕೇಳಿದಷ್ಟು ಲಾರಿಗಳು ನಮ್ಮಲ್ಲಿವೆ, ಪ್ರತಿ ಲಾರಿಗೆ 200 ರೂಪಾಯಿ ಬಾಡಿಗೆ ಆಗುತ್ತೆ ಎಂದಾಗ, ಸರಿ ಕಳಿಸಿಕೊಡಿ ಎಂದು ಫೋನಿಟ್ಟರು. ಕಾಟನ್‌ಪೇಟೆಯ ಹತ್ತಿರ ನಿಲ್ಲಿಸುತ್ತಿದ್ದುದು ಗೊತ್ತಿದ್ದರಿಂದ ಅಲ್ಲಿಗೆ ಹೋಗಿ, ಲಾರಿಯವರು ಅಲ್ಪ–ಸ್ವಲ್ಪ ಪರಿಚಯವಿದ್ದವರೊಬ್ಬ ಚಾಲಕನನ್ನು ಕರೆದು 'ಅಣ್ಣಾ, ನಂಜನಗೂಡಿಗೆ ಹತ್ತಿ ತೆಗೆದುಕೊಂಡು ಹೋಗಬೇಕು;

8 ಲಾರಿಗಳು ಬಾಡಿಗೆಗೆ ಬರ್ತೀರಾ? ಎಂದು ಕೇಳಿದಾಗ, ಈ ಹುಡುಗನ ಮಾತಿನಲ್ಲಿ ನಂಬಿಕೆಯಿರಿಸದ ಲಾರಿಯ ಚಾಲಕ ಸ್ನೇಹಿತರೆಲ್ಲರೂ ಇವನನ್ನು ಗೇಲಿ ಮಾಡಿ ನಗಾಡುತ್ತಿದ್ದರು. ಆಗ ವಿಚಲಿತನಾಗದೆ 'ನಾನು ಕೂಲಿಯವನು, ನಮ್ಮ ಯಜಮಾನರು' ಕಳುಹಿಸಿದ್ದಾರೆಂದು ಹೇಳಿದಾಗ ಚೌಕಾಸಿ ಮಾಡಿ ಒಂದು ಲಾರಿಗೆ 80 ರೂಪಾಯಿಯಂತೆ ವ್ಯವಹಾರ ಕುದುರಿಸಿಕೊಂಡವನೇ ಈ ವಿಷಯವನ್ನು ಮಾಲಕರಿಗೆ ತಿಳಿಸಲು ಓಡಿಬಂದು ಎಲ್ಲ ವಿವರವನ್ನು ಹೇಳಿದಾಗ ಇವನ ಮೇಲೆ ನಂಬಿಕೆಯಿದ್ದದ್ದರಿಂದ ನೀನೇ ಹೋಗಿ ಹತ್ತಿ ಲೋಡನ್ನು ಇಳಿಸಿ, ಹಣ ಇಸ್ಕೊಂಡು ಬಾ ಎಂದು ಖರ್ಚಿಗೆ ಹತ್ತು ರೂಪಾಯಿ ಕೊಟ್ಟು ಕಳುಹಿಸಿದರು. ಹತ್ತಿ ತುಂಬಿಕೊಂಡ ಲಾರಿಗಳು ಕಂಪನಿ ಮುಟ್ಟಲು ರಾತ್ರಿ ಹನ್ನೊಂದು ಗಂಟೆಯಾಗಿದ್ದರಿಂದ ಕಂಪನಿಯಲ್ಲಿ ಯಾವ ಕೂಲಿಯವರು ಅನ್‌ಲೋಡ್ ಮಾಡಲು ಬೆಳಗ್ಗೆವರೆಗೆ ಕಾಯಬೇಕಾಗುತ್ತದೆಂಬ ಭಯದಿಂದ ಮರಳಿ ತಮ್ಮ ಗೂಡನ್ನು ಸೇರಬೇಕಾದ ಆತುರದಲ್ಲಿ ಎಲ್ಲರೂ ಸೇರಿಕೊಂಡು ಅರ್ಧಗಂಟೆಯಲ್ಲಿ ಅನ್‌ಲೋಡ್ ಮಾಡಿದರು. ನಾರಾಯಣನು ಅವರಿಗೆ ಕೊಡಬೇಕಾದ ಬಾಡಿಗೆಯನ್ನು ಕೊಟ್ಟರು. ಈ ಹುಡುಗನ ಒಳ್ಳೆತನ ನೋಡಿ ಬಾಡಿಗೆಯಲ್ಲಿ ಹತ್ತು ರೂಪಾಯಿ ಕಡಿಮೆ ತೆಗೆದುಕೊಂಡು ಮೊದಲೇ ತಡವಾಗಿದ್ದರಿಂದ ಮಾಲಕರ ನಂಬಿಕೆ ಉಳಿಯಲು ಲಾರಿಗಳು ವೇಗವಾಗಿ ತಮ್ಮ ಹಾದಿ ಹಿಡಿದವು. ಇತ್ತ ಬೆಳಗಿನವರೆಗೂ ಹತ್ತಿಯನ್ನು ಕಾವಲು ಕಾಯ್ದು ಮ್ಯಾನೇಜರ್ ಬಂದೊಡನೆ ಲೆಕ್ಕ ಒಪ್ಪಿಸಿ ಅವರಿಂದ ಹಣದ ಚೆಕ್‌ನ್ನು ತೆಗೆದುಕೊಂಡು ಜೀವನದಲ್ಲಿ ಏನೋ ದೊಡ್ಡ ಸಾಧನೆ ಮಾಡಿದ ತೃಪ್ತಿಭಾವದಿಂದ ಹೊರಡಬೇಕಾದರೆ, ಹುಡುಗಾಟದ ನಾರಾಯಣನು ಯಜಮಾನರಿಗೆ ಕೊಡಬೇಕಾದ ಹಣದ ಚೆಕ್ ಬೇಗ ತಲುಪಿಸಬೇಕೆಂದು ಯಾವ ಯೋಚನೆ ಮಾಡದೆ, ಮನಸ್ಸಿನಲ್ಲಿ ಪ್ರವಾಸ ಮಾಡಲು ವಾಹನವನ್ನು ಬಾಡಿಗೆ ಪಡೆದುಕೊಂಡು ಮೈಸೂರಿನ ಚಾಮುಂಡಿ ಬೆಟ್ಟ, ಕೃಷ್ಣರಾಜ ಸಾಗರ, ಪ್ರಾಣಿ ಸಂಗ್ರಹಾಲಯ ಇತ್ಯಾದಿ ತಾಣಗಳನ್ನು ನೋಡಿಕೊಂಡು ರಾತ್ರಿ 9 ಗಂಟೆಯ ವೇಳೆಗೆ ಯಜಮಾನರ ಮುಂದೆ ನಿಂತು ಚೆಕ್‌ನ್ನು ಮುಂದಿರಿಸಿದಾಗ ಅವರಿಗೆ ನಂಬಲಸಾಧ್ಯ ಮತ್ತು ಆಶ್ಚರ್ಯವಾಗಿ ಬೆನ್ನುತಟ್ಟಿ 100 ರೂಪಾಯಿ ಇನಾಮು ಕೊಟ್ಟು ಕಳುಹಿಸಿದರು. ಇವನ ಕಾರ್ಯವೈಖರಿ ಮೆಚ್ಚುಗೆಯಾಗಿ ಶಿವಮೊಗ್ಗದಲ್ಲಿ ಹೊಸ ಆಫೀಸಿಗೆ ಬಡ್ತಿಯ ರೂಪದಲ್ಲಿ ಮ್ಯಾನೇಜರ್ ಆಗಿ ನೇಮಕ ಮಾಡಿದರು. ಅಲ್ಲಿಯೂ ತಮ್ಮ ಪ್ರಾಮಾಣಿಕತೆಯನ್ನು ಮುಂದುವರೆಸಿದರು. ನಿದರ್ಶನವೆಂಬಂತೆ ಕಂಪನಿಗೆ ಬರುವ ಅತಿಥಿಗಳಿಗೆ ಸ್ಪೆಷಲ್ ಟೀ ಕುಡಿಸಿ, ತಾವು ಸಾದಾ ಟೀ ಕುಡಿಯುತ್ತಿದ್ದರು. ಏಕೆಂದರೆ ಅದು ಕಂಪನಿಯ ಹಣವಾಗಿತ್ತು. ವಿಶ್ವೇಶ್ವರಯ್ಯನವರು ರಾತ್ರಿ ಸಮಯದಲ್ಲಿ ಸರ್ಕಾರದ ಕೆಲಸ ಮಾಡುವಾಗ ಸರ್ಕಾರದ ಹಣದ ಮೇಣದಬತ್ತಿಯನ್ನೇ ಬಳಸುತ್ತಿದ್ದರು. ವೈಯಕ್ತಿಕ ಕಾರ್ಯಕ್ಕೆ ತಮ್ಮ ಹಣದಿಂದಲೇ ಖರೀದಿಸಿದ ಮೇಣದಬತ್ತಿ ಬಳಸುತ್ತಿದ್ದರಂತೆ. ನಾರಾಯಣನ ಗುಣ ಇಂಥ ಮಹಾನುಭಾವರ ಆದರ್ಶವನ್ನು

ನೆನಪಿಸುತ್ತದೆ.

ಅದೊಂದು ದಿನ ಯಜಮಾನರು ಫೋನ್ ಮಾಡಿ ಯಾಕೆ? ಏನು? ಪ್ರಶ್ನೆ ಮಾಡದೆ ಬಟ್ಟೆಗಳನ್ನು ತೆಗೆದುಕೊಂಡು ಬಾಂಬೆಗೆ ಹೋಗಬೇಕೆಂದು ಆದೇಶವಿತ್ತರು. ಯಜಮಾನರು ದಕ್ಷಿಣ ಭಾರತದ ತನ್ನೆಲ್ಲಾ ಕಚೇರಿಗಳಿಗೆ 'ಮುಖ್ಯ ಕಚೇರಿ'ಯನ್ನು ಬಾಂಬೆಯನ್ನು ಕೇಂದ್ರಸ್ಥಾನವನ್ನಾಗಿ ಮಾಡಿದ್ದರಿಂದ ಇಂಗ್ಲಿಷ್–ಹಿಂದಿ ಬಲ್ಲವನಾಗಿದ್ದರಿಂದ ಜೊತೆಗೆ ಸಂಸಾರವಿಲ್ಲದ ಈ ಬ್ರಹ್ಮಚಾರಿಯನ್ನು 'ಜನರಲ್ ಮ್ಯಾನೇಜರ್' ಎಂದು ನೇಮಕ ಮಾಡಿ, ಎಲ್ಲ ಕಚೇರಿಗೆ ಈತನನ್ನು ನಾಯಕನಾಗುವಂತೆ ಮಾಡಿದರು. ಇದೆಲ್ಲಾ ಒಬ್ಬ ಮನುಷ್ಯ ನಿಸ್ವಾರ್ಥ, ಪ್ರಾಮಾಣಿಕತೆ, ಕೊಟ್ಟ ಕೆಲಸ ಅಚ್ಚುಕಟ್ಟಾಗಿ ಮಾಡಿದರೆ ಸಾಮಾನ್ಯ ವ್ಯಕ್ತಿಯೋರ್ವ ಹಂತ–ಹಂತವಾಗಿ ಹೇಗೆ ಮೇಲೇರಬಹುದೆಂಬುದಕ್ಕೆ ನಮ್ಮ ನಾರಾಯಣನೇ ಸಾಕ್ಷಿ.

ಮುಂಬೈ ಕಚೇರಿಯ ಕೆಲಸ ಮುಗಿಸಿಕೊಂಡು ಬಾಗಿಲು ಹಾಕುವ ಸಂದರ್ಭದಲ್ಲಿ ಒಬ್ಬ ರೌಡಿ ಬಂದು ನಾನು 'ಛೋಟಾ ಶಕೀಲ್' ಕಡೆಯವನು ಹಫ್ತಾ ಕೊಡಬೇಕೆಂದು ಒತ್ತಾಯಿಸಿದ. ಆದರೆ ನಾರಾಯಣನು ನೋಡಪ್ಪಾ ನಾನು ಇಲ್ಲಿ ಕೆಲಸಗಾರ, ಇಲ್ಲಿಯ ಹಣ ಯಜಮಾನರದ್ದು, ನಿನಗೆ ಕೊಟ್ಟರೆ ಅವರಿಗೆ ಹೇಗೆ ಲೆಕ್ಕ ಕೊಡಲು ಸಾಧ್ಯ? ನಮಗೆ ಕೊಟ್ಟು ಅಭ್ಯಾಸವಿಲ್ಲವೆಂದು ಕೀಲಿ ಹಾಕುತ್ತಿದ್ದರು. ನೀನು ಈ ಏರಿಯಾಕ್ಕೆ ಹೊಸಬ ಅಂತಾ ಕಾಣುತ್ತೆ ಸುಮ್ಮನೆ ವಾದ ಮಾಡದೆ ಹಣ ಕೊಡು ಎಂದು ವಾದ ಮಾಡಿದರೆ, ಅದಕ್ಕೆ ನಾರಾಯಣ ತಿರಸ್ಕಾರ ಮಾಡಿದ್ದರಿಂದ ರೌಡಿಯು ಹಿಂದಿಯಲ್ಲಿ ಅವಾಚ್ಯ ಶಬ್ದಗಳಿಂದ ಬೈಯತೊಡಗಿದ್ದರಿಂದ ನಾರಾಯಣನಿಗೆ ಸಿಟ್ಟು ತಡೆಯಲಾರದೆ ಅವನ ಎದೆಗೆ ಜಾಡಿಸಿ ಒದ್ದುಬಿಟ್ಟನು. ಕೆಳಗೆ ಬಿದ್ದ ರೌಡಿಯನ್ನು ಹಿಗ್ಗಾಮುಗ್ಗಾ ಕಾಲಿನಿಂದ ಒದೆಯುತ್ತಿದ್ದ ಹೊಡೆತಕ್ಕೆ ರೌಡಿ ರೋದನೆ ಮುಗಿಲು ಮುಟ್ಟಿದ್ದರಿಂದ ಜನರೆಲ್ಲಾ ಸೇರಿ ನೋಡಿದಾಗ ಇಲ್ಲಿಯವರೆಗೂ ತಾವು ಅವನಿಗೆ ಹಫ್ತಾ ನೀಡುತ್ತಿದ್ದ ವ್ಯಕ್ತಿಯನ್ನು ಕಂಡು ಛೀಮಾರಿ ಹಾಕಿ ನಾರಾಯಣನನ್ನು ಹಾಡಿ ಹೊಗಳಿದರು.

ಅಂದಿನಿಂದ ನೋಡುವವರಿಗೆ ರೌಡಿಯಾಗಿ ಕಂಡರೂ ಆದರ್ಶರಾಗಿ ಕಾಣುತ್ತಿದ್ದರು. ರಾತ್ರಿ 12 ರ ಮಧ್ಯರಾತ್ರಿಯಲ್ಲಿ ಹಸಿವಿನಿಂದ ನರಳುತ್ತಿದ್ದವರಿಗೆ ಅನ್ನದ ಪೊಟ್ಟಣಗಳನ್ನು ಕಟ್ಟಿಸಿಕೊಂಡು ಕೊಡುತ್ತಿದ್ದನು. ಚಳಿಯಲ್ಲಿ ನಡುಗುವ ಮುದುಕರಿಗೆ ಹೊದಿಕೆಗಳನ್ನು ಕೊಡುತ್ತಿದ್ದರಿಂದ ಅವರ ಪಾಲಿನ ಈ ನಾರಾಯಣನೇ ನಿಜವಾದ ದೇವರಾಗಿದ್ದನು. ವೃತ್ತಿ ಜೀವನದಲ್ಲಿ ಎಷ್ಟೇ ಪ್ರಾಮಾಣಿಕರಾಗಿದ್ದರೂ ಕೆಲವೊಂದು ಸಲ ಕೆಟ್ಟ ಗಳಿಗೆಗಳು ಬರುತ್ತವೆ. ಅದೊಂದು ದಿನ ಕಂಪನಿಯ ಖಾಯಂ ಗಿರಾಕಿಯೊಬ್ಬರು ಹಣದ ಮುಗ್ಗಟ್ಟಿಗೆ ಒಳಗಾಗಿದ್ದರಿಂದ ನಾಲ್ಕೈದು ದಿನಗಳಲ್ಲಿ ನಿಮ್ಮ

ಹಣ ಮುಟ್ಟಿಸುತ್ತೇನೆಂದು ಸರಕು ಸಾಗಾಣಿಕೆಗೆ ಲಾರಿಗಳನ್ನು ಕಳಿಸಬೇಕೆಂದು ನಾರಾಯಣನಲ್ಲಿ ಭಿನ್ನವಿಸಿಕೊಂಡಾಗ ಅವರ ಪರಿಸ್ಥಿತಿಗೆ ಸ್ಪಂದಿಸಿ ಒಪ್ಪಿ ಲಾರಿಗಳನ್ನು ಕಳಿಸಿಕೊಟ್ಟರು. ಈ ವಿಚಾರ ಯಜಮಾನರಿಗೆ ಗೊತ್ತಾಗಿದ್ದೇ ತಡ, "ನೀನು ಮ್ಯಾನೇಜರ್ ಆದ ಮಾತ್ರಕ್ಕೆ ನಿನಗಿಷ್ಟ ಬಂದಹಾಗೆ ತೀರ್ಮಾನ ತೆಗೆದುಕೊಳ್ತೀಯಾ? ಇದೇನು ನಿಮ್ಮಪ್ಪನ ಕಂಪನಿಯಾ? ಬಂಡವಾಳ ನಿಮ್ಮ ತಾತನದಾ" ಎಂದು ಕುಟುಂಬಕ್ಕೆ ಸಂಬಂಧಿಸಿದವರ ಕುರಿತು ಕೇವಲವಾಗಿ ಮಾತನಾಡಿದರೂ ಶಾಂತ ರೀತಿಯಿಂದ ಇದ್ದು 'ವ್ಯಾಪಾರದಲ್ಲಿ ಹಣಕ್ಕೆ ಕೊಟ್ಟಷ್ಟು ಬೆಲೆಯನ್ನು ಮನುಷ್ಯತ್ವಕ್ಕೂ ಕೊಡಬೇಕೆಂದು" ಹೇಳಿದಾಗ, ಯಜಮಾನರು 'ನಿನ್ನಿಂದ ಪಾಠ ಹೇಳಿಸಿಕೊಳ್ಳುವ ಅಗತ್ಯವಿಲ್ಲ, ನೀನೊಬ್ಬ ನಮ್ಮ ಕಂಪನಿಯ ಕೂಲಿ ಆಳು' ಎಂದು ನಾರಾಯಣನು ಇದುವರೆಗೂ ತಾನು ದುಡಿಯುವ ಕಂಪನಿಯ ಏಳ್ಗೆಗೆ ಶ್ರಮಿಸಿದ ಫಲ, ಪ್ರಾಮಾಣಿಕತೆ, ನಿಸ್ವಾರ್ಥ ದುಡಿಮೆಗೆ ಬೆಲೆ ನೀಡದ ಈ ಜಾಗದಲ್ಲಿ ತಾನು ಇರಬಾರದೆಂದು ನಿರ್ಧರಿಸಿ ತಕ್ಷಣವೇ ರಾಜೀನಾಮೆ ಪತ್ರವನ್ನು ಮೇಜಿನ ಮೇಲಿಟ್ಟು ಕೊನೆಯ ನಮಸ್ಕಾರ ಮಾಡಿ ಕಂಪನಿಯಿಂದ ಹೊರಬಂದರು. ಯಜಮಾನರಿಗೆ ತಪ್ಪಿನ ಅರಿವಾಗಿ ಎಷ್ಟೇ ಕೇಳಿಕೊಂಡರೂ ಒಂದು ಸಲ ತೆಗೆದುಕೊಂಡ ನಿರ್ಧಾರವನ್ನು ಮರಳಿ ಹಿಂದಿಡದ ಸ್ವಭಾವದ ನಾರಾಯಣ ಅಲ್ಲಿರಲು ಒಪ್ಪಲಿಲ್ಲ.

ನಾರಾಯಣ ರಾಜೀನಾಮೆ ನೀಡಿದ ಸುದ್ದಿ ಹಲವು ಕಂಪನಿಗಳಿಗೆ ಗೊತ್ತಾಗಿದ್ದೇ ತಡ ಬೆಂಗಳೂರಿನ ಲಾರಿ ಮಾಲಕರೊಬ್ಬರು ಮೊದಲಿನ ಕಂಪನಿ ಕೊಡುತ್ತಿದ್ದ ಸಂಬಳಕ್ಕಿಂತ ಎರಡುಪಟ್ಟು ಜಾಸ್ತಿ ಕೊಡಲು ಒಪ್ಪಿಕೊಂಡು ಆಹ್ವಾನವಿತ್ತರು. ಅವರ ಮಾತಿಗೆ ಬೆಲೆಕೊಟ್ಟು ಕಂಪನಿಗೆ ಸೇರಿಕೊಂಡು ಇಲ್ಲಿಯೂ ಉತ್ತಮ ರೀತಿಯಿಂದ ಕಾರ್ಯನಿರ್ವಹಿಸಿ ಕಂಪನಿಗೆ ಲಾಭ ತಂದು ಕೊಟ್ಟದ್ದಲ್ಲದೆ ಉತ್ತಮ ಸ್ಥಾನಕ್ಕೆ ಕೊಂಡೊಯ್ದರು. ಒಂದು ಸಲ ರಾಮಯ್ಯ ರೆಡ್ಡಿಯವರು ಒಂದು ಲಾರಿ ಬಾಡಿಗೆಗೆ ಬೇಕಾಗಿದ್ದರಿಂದ ಕೇಳಿಕೊಂಡು ಕಂಪನಿಗೆ ಬಂದಾಗ ಯಾರೋ ಒಳಗಿರುವ ಮ್ಯಾನೇಜರ್‌ನನ್ನು ಕೇಳಿ ಎಂದು ಕಳುಹಿಸಿದರು. ರಾಮಯ್ಯನವರು ಒಳಹೋಗಿ ಮ್ಯಾನೇಜರ್ ಖುರ್ಚಿಯ ಮೇಲೆ ಕುಳಿತಿದ್ದ ನಾರಾಯಣನನ್ನು ಕಂಡು ಮಾತನಾಡಿಸಿದಾಗ ಅಣ್ಣನನ್ನು ಗುರುತಿಸಿ ಇಬ್ಬರೂ ಆನಂದಭಾಷ್ಪ ಸುರಿಸಿ, ಯೋಗಕ್ಷೇಮ ವಿಚಾರಿಸಿದರು. "ನೀನು ಮನೆಬಿಟ್ಟು ಹೋದ ನಂತರ ತಂದೆಯವರು ತುಂಬಾ ನೊಂದುಕೊಂಡರು. ನೀನು ಮರಳಿ ಬರುತ್ತೀಯಾ ಎಂಬ ನಂಬಿಕೆಯಿಂದ ಒಂದುವರೆ ಎಕರೆ ಜಮೀನನ್ನು ನಿನಗಾಗಿಯೇ ಮೀಸಲಾಗಿಟ್ಟಿದ್ದಾರೆಂದು ತಿಳಿಸಿ, ನೀನು ಈಗಿನಿಂದಲೇ ಊರಿಗೆ ಬರಬೇಕೆಂದು ಒತ್ತಾಯಿಸಿ ಕರೆದುಕೊಂಡು ಬಂದೇ ಬಿಟ್ಟರು. ಮಗನನ್ನು ಕಂಡ ತಂದೆ-ತಾಯಿಗಳಿಗೆ-ಕುಟುಂಬದ ಸದಸ್ಯರೆಲ್ಲರಿಗೂ ಹಬ್ಬದಂತೆ ನಾರಾಯಣನನ್ನು ಕಂಡು ಸಂತಸ ಹಂಚಿಕೊಂಡರು.

ಹೀಗೆ ಕುರಿ ಕಾಯಲು ಹೋಗಿ ತಡವಾಗಿ ಬಂದಿದ್ದರಿಂದ ಅಪ್ಪನ ಏಟಿನಿಂದ ಅವಮಾನಿತನಾಗಿ, ದಾಯಾದಿಗಳ ಚುಚ್ಚು ಮಾತುಗಳಿಂದ ಬೇಸರಗೊಂಡು ಬುದ್ಧನಂತೆ ಮಧ್ಯರಾತ್ರಿ ಮನೆಬಿಟ್ಟು ಹೋಗಿ ಸಾಧಕನಾಗಿ ಅಣ್ಣ ರಾಮಯ್ಯನ ಮೂಲಕ ಮೂಲ ಗೂಡು ಸೇರಿದ ಒಂಟಿ ಹಕ್ಕಿಗೆ ಜೋಡಿಯಾಗಿ ಸರೋಜಮ್ಮನವರೊಂದಿಗೆ ವಿವಾಹ ಮಾಡಿಕೊಟ್ಟರು. ತಂದೆಯವರ ಆಸೆಯಂತೆ ಕಂಪನಿಯ ಕೆಲಸ ಬಿಟ್ಟು ತಮ್ಮ ಮನೆತನದ ಉಸಿರಾದ ಕೃಷಿಯಲ್ಲಿ ನಂಬಿಕೆಯಿರಿಸಿ ಬದುಕಿನ ಪಯಣ ಸಾಗಿಸಿದರು.

**ಪರಾಮರ್ಶನ ಗ್ರಂಥಗಳು:**


1. ಆನಂದ ಎನ್.ಎಲ್. & ಗುಂಡಪ್ಪ ದೇವಿಕೇರಿ, (2014), ನೆಲದೊಡಲ ಚಿಗುರು, ನವಕರ್ನಾಟಕ ಪ್ರಕಾಶನ, ಬೆಂಗಳೂರು.
2. ಆನಂದ ಎನ್.ಎಲ್., (2019), ಸಾವಯವ ಕೃಷಿಕ ಡಾ.ಎಲ್.ನಾರಾಯಣರೆಡ್ಡಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.